## RPF SI 2024 ಅಧಿಕೃತ ಪ್ರಶ್ನೆಪತ್ರಿಕೆಗಳು

ಪ್ರ.1) ಒಬ್ಬ ವ್ಯಕ್ತಿಯು ಒಂದು ವ್ಯೂ ಪಾಯಿಂಟ್‌ಗೆ ನಡೆದುಕೊಂಡು ಹೋಗುತ್ತಾನೆ ಮತ್ತು ಮರಳಿ ತನ್ನ ಆರಂಭಿಕ ಸ್ಥಳಕ್ಕೆ ಬರುವಾಗ ಒಂದು ಸ್ಥಿರವಾದ ವೇಗದಲ್ಲಿ ಕಾರಿನಲ್ಲಿ ಬರುತ್ತಾನೆ ಮತ್ತು ಇದಕ್ಕಾಗಿ ಅವನು ಒಟ್ಟು 3 ಗಂಟೆ 30 ನಿಮಿಷಗಳನ್ನು ತೆಗೆದುಕೊಳ್ಳುತ್ತಾನೆ. ಒಂದು ವೇಳೆ ಅವನು ಕಾರಿನಲ್ಲಿ ಹೋಗಿ, ಕಾರಿನಲ್ಲಿಯೇ ಮರಳಿ ಬಂದಿದ್ದರೆ 3 ಗಂಟೆಗಳಷ್ಟು ಸಮಯ ಗಳಿಸುತ್ತಿದನು. ಒಂದು ವೇಳೆ ಅವನು ಒಂದೇ ವೇಗದಲ್ಲಿ ನಡೆಯುತ್ತಾ ಹೋಗಿ, ನಡೆಯುತ್ತಾ ಬಂದರೆ ಎಷ್ಟು ಸಮಯ ತೆಗೆದುಕೊಳ್ಳುತ್ತಾನೆ?

1. 5 ಗಂಟೆಗಳು 15 ನಿಮಿಷಗಳು
2. 6 ಗಂಟೆಗಳು 15 ನಿಮಿಷಗಳು
3. 7 ಗಂಟೆಗಳು 30 ನಿಮಿಷಗಳು
4. 6 ಗಂಟೆಗಳು 45 ನಿಮಿಷಗಳು

ಪ್ರ.2) ಒಂದು ಹಳ್ಳಿಯ ಜನಸಂಖ್ಯೆ 130000 ಆಗಿದೆ. ಒಂದು ವೇಳೆ ಜನಸಂಖ್ಯೆಯು ಮೊದಲ ವರ್ಷದಲ್ಲಿ ಶೇ.10 ರಷ್ಟು ಮತ್ತು ಎರಡನೇ ವರ್ಷದಲ್ಲಿ ಶೇ. 30 ರಷ್ಟು ಹೆಚ್ಚಾದರೆ, ಎರಡು ವರ್ಷಗಳ ನಂತರ ಹಳ್ಳಿಯ ಜನಸಂಖ್ಯೆಯು ________

1. 143000
2. 185900
3. 182000
4. 169000

ಪ್ರ.3) ಪೆಟ್ಟಿಗೆಗಳ ಸರಾಸರಿ ತೂಕ 14 kg ಆಗಿದೆ. ಅವುಗಳಲ್ಲಿ ಮೊದಲ ಪೆಟ್ಟಿಗೆಯ ತೂಕವು ಉಳಿದ ಪೆಟ್ಟಿಗೆಗಳ ತೂಕದ ಐದನೇ ಒಂದರಷ್ಟಿದೆ. ಹಾಗಾದರೆ ಮೊದಲ ಪೆಟ್ಟಿಗೆಯ ತೂಕ ಎಷ್ಟು?

1. 14 kg
2. 10 kg
3. 16 kg
4. 12 kg

ಪ್ರ.4) ಈ ಕೆಳಗಿನವುಗಳ ಪೈಕಿ ಯಾವ ಭಿನ್ನರಾಶಿಯು ಅತ್ಯಂತ ದೊಡ್ಡದಾಗಿದೆ?

$\frac{6}{9}, \frac{7}{84}, \frac{48}{79}, \frac{48}{55}$

1. $\frac{48}{55}$
2. $\frac{48}{79}$
3. $\frac{7}{84}$
4. $\frac{6}{9}$

ಪ್ರ.5) ಅತುಲ್ ಅವರು 173 ಕುರ್ಚಿಗಳನ್ನು ಮಾರಾಟ ಮಾಡಿದರು ಮತ್ತು 73 ಕುರ್ಚಿಗಳ ಮಾರಾಟ ಬೆಲೆಗೆ ಸಮನಾದ ಲಾಭವನ್ನು ಪಡೆದರು. ಹಾಗಾದರೆ ಅವರ ಶೇಕಡಾ ಲಾಭ ಎಷ್ಟು?

1. 73%
2. 68%
3. 78%
4. 83%

ಪ್ರ.6) ಇವುಗಳನ್ನು ಸಾಮಾನ್ಯ ಭಿನ್ನರಾಶಿಯ ರೂಪದಲ್ಲಿ ವ್ಯಕ್ತಪಡಿಸಿ.

$0.0\overline{13} + 0.\overline{32}$

1. $\frac{111}{990}$
2. $\frac{111}{330}$
3. $\frac{111}{999}$
4. $-\frac{111}{333}$

ಪ್ರ.7) ಇದರ ಮೌಲ್ಯ ಎಷ್ಟು?

$\frac{4}{6} + \frac{1}{6} + \frac{4}{12} + \frac{3}{6} - 1 =$

1. $\frac{15}{12}$
2. $\frac{7}{12}$
3. $\frac{8}{12}$
4. $-\frac{1}{12}$

ಪ್ರ.8) ವಿಶಾಲ್ ಅವರು ಒಂದು ದೋಣಿಯಲ್ಲಿ ಪ್ರವಾಹದ ವಿರುದ್ಧ ದಿಕ್ಕಿನಲ್ಲಿ 285 ಇಟ ದೂರವನ್ನು 45 ಗಂಟೆಗಳಲ್ಲಿ ಕ್ರಮಿಸುತ್ತಾರೆ ಮತ್ತು ಅವರು ಪ್ರವಾಹದ ದಿಕ್ಕಿನಲ್ಲಿ ಕ್ರಮಿಸಲು 18 ಗಂಟೆಗಳನ್ನು ತೆಗೆದುಕೊಳ್ಳುತ್ತಾರೆ. ಹಾಗಾದರೆ ಪ್ರವಾಹದ ವೇಗವನ್ನು ಕಂಡುಹಿಡಿಯಿರಿ.

1. 4.75 km/h
2. 7.51 km/h
3. 9.17 km/h
4. 3.35 km/h

ಪ್ರ.9) ಒಂದೇ ವಾರ್ಷಿಕ ಬಡ್ಡಿ ದರಗಳಲ್ಲಿ, 2 ವರ್ಷಗಳಲ್ಲಿ ಬರುವ ಸರಳ ಬಡ್ಡಿ ₹60 ಆಗಿದ್ದರೆ ಮತ್ತು ಚಕ್ರಬಡ್ಡಿ ₹66 ಆಗಿದ್ದರೆ, ಅಸಲು ಮೊತ್ತ (₹ ಗಳಲ್ಲಿ) ಎಷ್ಟು?

1. 150
2. 145
3. 143
4. 154

ಪ್ರ.10) ₹2000 ಮೊತ್ತದ ಮೇಲೆ ವಾರ್ಷಿಕ 6.25% ಬಡ್ಡಿದರದಲ್ಲಿ 2023 ರ ಫೆಬ್ರವರಿ 14 ರಿಂದ 2023 ರ ಏಪ್ರಿಲ್ 28 ರ ಅವಧಿಯವರೆಗೆ ಬರುವ ಸರಳ ಬಡ್ಡಿಯನ್ನು (₹ ಗಳಲ್ಲಿ) ಕಂಡುಹಿಡಿಯಿರಿ.

1. 26
2. 23
3. 24
4. 25

ಪ್ರ.11) ಎಂಟು ಸಂಖ್ಯೆಗಳ ಸರಾಸರಿ 20 ಆಗಿದೆ. ಅವುಗಳಲ್ಲಿ ಐದು ಸಂಖ್ಯೆಗಳ ಸರಾಸರಿ 12 ಆಗಿದೆ. ಉಳಿದ ಮೂರು ಸಂಖ್ಯೆಗಳ ಸರಾಸರಿ ಎಷ್ಟು?

1. 35.33
2. 32.33
3. 34.33
4. 33.33

LAXMIKANT PATIL

**ಪ್ರ.12)** ಒಂದು ಸಂಖ್ಯೆಯ 20% ರಷ್ಟು ಭಾಗವು 530 ರ 20% ಕ್ಕಿಂತ 180 ರಷ್ಟು ಹೆಚ್ಚಾಗಿದೆ. ಹಾಗಾದರೆ ಆ ಸಂಖ್ಯೆ ಯಾವುದು?

1. 1280
2. 1480
3. 1430
4. 1530

**ಪ್ರ.13)** ಸುನೈನಾ ಮತ್ತು ರೀಮಾ ಇಬ್ಬರೂ ಒಂದು ವ್ಯವಹಾರದಲ್ಲಿ 3 : 8. ರ ಅನುಪಾತದಲ್ಲಿ ಹೂಡಿಕೆ ಮಾಡಿದ್ದಾರೆ. ಅವರು ಗಳಿಸಿದ ಒಟ್ಟು ಲಾಭವು ರೂ. 3927 ಆಗಿದ್ದರೆ, ಸುನೈನಾ ಮತ್ತು ರೀಮಾ ಇಬ್ಬರ ಲಾಭದ ನಡುವಿನ ವ್ಯತ್ಯಾಸ (ರೂ.ಗಳಲ್ಲಿ) ಎಷ್ಟು?

1. 1785
2. 1885
3. 1935
4. 1635

**ಪ್ರ.14)** ಒಂದು ವರ್ಷದ ಮೊದಲ ಮೂರು ತಿಂಗಳಲ್ಲಿ ಪ್ರಾಂಜಲ್ ಅವರ ಮಾಸಿಕ ಸರಾಸರಿ ಗಳಿಕೆ ₹19008 ಆಗಿತ್ತು. ಏಪ್ರಿಲ್ ತಿಂಗಳಿನಲ್ಲಿ ಅವರ ಗಳಿಕೆಯು ಮೊದಲ ಮೂರು ತಿಂಗಳ ಸರಾಸರಿ ಗಳಿಕೆಗಿಂತ ಶೇ. 50 ರಷ್ಟು ಹೆಚ್ಚಾಗಿದೆ. ಇಡೀ ವರ್ಷದಲ್ಲಿ ಅವರ ಮಾಸಿಕ ಸರಾಸರಿ ಗಳಿಕೆ ₹99708 ಆಗಿದ್ದರೆ, ಮೇ ನಿಂದ ಡಿಸೆಂಬರ್ ವರೆಗೆ ಪ್ರಾಂಜಲ್ ನ ಮಾಸಿಕ ಸರಾಸರಿ ಗಳಿಕೆ (₹ಗಳಲ್ಲಿ) ಎಷ್ಟು?

1. 138867
2. 138870
3. 138871
4. 138869

**ಪ್ರ.15)**

ಕೊಟ್ಟಿರುವ ಕೋಷ್ಟಕವನ್ನು ಅಧ್ಯಯನ ಮಾಡಿ ಮತ್ತು ಈ ಕೆಳಗಿನ ಪ್ರಶ್ನೆಗೆ ಉತ್ತರಿಸಿ.

ಕೆಳಗಿನ ಕೋಷ್ಟಕವು 4 ಬ್ಯಾಂಕುಗಳು ವಿವಿಧ ವರ್ಷಗಳಲ್ಲಿ ವಿತರಿಸಿದ ಸಾಲದ (₹ ಕೋಟಿಗಳಲ್ಲಿ) ವಿವರಗಳನ್ನು ತೋರಿಸುತ್ತದೆ.

| ಬ್ಯಾಂಕುಗಳು | ವರ್ಷಗಳು 1992 | 1993 | 1994 | 1995 | 1996 |
|---|---|---|---|---|---|
| P | 20 | 25 | 47 | 31 | 72 |
| Q | 28 | 35 | 20 | 43 | 39 |
| R | 31 | 32 | 24 | 18 | 15 |
| S | 33 | 18 | 29 | 34 | 44 |
| ಒಟ್ಟು | 112 | 110 | 120 | 126 | 170 |

1994 ರಿಂದ 1995 ರವರೆಗೆ ಎಲ್ಲಾ ಬ್ಯಾಂಕುಗಳ ಸಾಲ ವಿತರಣೆಯಲ್ಲಿ ಆಗಿರುವ ಶೇಕಡಾವಾರು ಹೆಚ್ಚಳ ಎಷ್ಟು?

1. 8%
2. 5%
3. 10%
4. 7%

**ಪ್ರ.16)** ಈ ಗಣಿತೋಕ್ತಿಯ ಮೌಲ್ಯವನ್ನು ಕಂಡುಹಿಡಿಯಿರಿ.

$$\left|(14 \div 7) \times \left\{\frac{84}{6} + \frac{14}{2} \times (5 - 3)\right\}\right|$$

1. **54**
2. **56**
3. **42**
4. **46**

**ಪ್ರ.17)** ಎಂಟು ಸಂಖ್ಯೆಗಳ ಸರಾಸರಿ 20 ಆಗಿದೆ. ಅವುಗಳಲ್ಲಿ ಐದು ಸಂಖ್ಯೆಗಳ ಸರಾಸರಿ 16 ಆಗಿದೆ. ಉಳಿದ ಮೂರು ಸಂಖ್ಯೆಗಳ ಸರಾಸರಿ ಎಷ್ಟು?

1. 26.67
2. 25.67
3. 28.67
4. 27.67

**ಪ್ರ.18)** ಇದರ ಮೌಲ್ಯ ಕಂಡುಹಿಡಿಯಿರಿ :

**33 ÷ 11 × 3 - 3 × 4**

1. −4
2. −3
3. −1
4. 0

**ಪ್ರ.19)** ಒಂದು ಟೊಳ್ಳಾದ ಗೋಳಾಕಾರದ ಕವಚವನ್ನು 6 g/cm3 ಸಾಂದ್ರತೆ ಇರುವ ಒಂದು ಲೋಹದಿಂದ ಮಾಡಲಾಗಿದೆ. ಅದರ ಒಳ ಮತ್ತು ಹೊರ ತ್ರಿಜ್ಯಗಳು ಕ್ರಮವಾಗಿ 2 cm ಮತ್ತು 4 cm ಆಗಿವೆ. ಹಾಗಾದರೆ ಕವಚದ ತೂಕ (kgಗಳಲ್ಲಿ) ಎಷ್ಟು ($\pi = \frac{22}{7}$ ಬಳಸಿ)

1. 2.73
2. 3.28
3. 1.408
4. 1.592

**ಪ್ರ.20)** ರಿಯಾಯಿತಿ ಮಾರಾಟದ ಸಮಯದಲ್ಲಿ, ರಾಘವ್ ಅವರು ₹50 ನಮೂದಿತ ಬೆಲೆಯ ನೋಟ್ ಪುಸ್ತಕವೊಂದನ್ನು 78% ರಿಯಾಯಿತಿಯಲ್ಲಿ ಖರೀದಿಸಿದರು ಮತ್ತು ₹100 ನಮೂದಿತ ಬೆಲೆಯ ಲೇಖನಿಯೊಂದನ್ನು 8% ರಿಯಾಯಿತಿಯಲ್ಲಿ ಖರೀದಿಸಿದರು. ಹಾಗಾದರೆ ಈ ಮಾರಾಟದಿಂದಾಗಿ ಅವರು ಉಳಿತಾಯ ಮಾಡಿದ ಹಣ (₹ ಗಳಲ್ಲಿ) ಎಷ್ಟು)

1. 50
2. 47
3. 44
4. 45

**ಪ್ರ.21)** ಪ್ರಿಯಾ ಮತ್ತು ಆಯುಷಿ ಇಬ್ಬರೂ ಒಟ್ಟಾಗಿ ಒಂದು ವ್ಯಾಪಾರದಲ್ಲಿ ₹45600 ಹೂಡಿಕೆ ಮಾಡಿದರು. ವರ್ಷದ ಕೊನೆಯಲ್ಲಿ ಒಟ್ಟು ₹7500 ಲಾಭ ಬಂತು. ಅದರಲ್ಲಿ ಪ್ರಿಯಾ ಅವರ ಪಾಲು ₹1800 ಆಗಿತ್ತು. ಹಾಗಾದರೆ ಆಯುಷಿ ಅವರು ಎಷ್ಟು ಹಣ ಹೂಡಿಕೆ ಮಾಡಿದ್ದರು?

1. ₹35535
2. ₹32910
3. ₹34445
4. ₹34656

**ಪ್ರ.22)** 18 cm ಗೆ ಸಮನಾದ ವ್ಯಾಸ ಹೊಂದಿರುವ ಒಂದು ಗೋಳದ ಮೇಲ್ಮೈ ವಿಸ್ತೀರ್ಣವನ್ನು ಕಂಡುಹಿಡಿಯಿರಿ.


www.shikarat.com

1. 886 $cm^2$
2. 69 $cm^2$
3. 324 $cm^2$
4. 792 $cm^2$

ಪ್ರ.23) $\left[(81 \div 3) \times \left\{\frac{40}{8} + \frac{34}{2} \times (9 - 7)\right\}\right]$

ಈ ಗಣಿತೋಕ್ತಿಯ ಮೌಲ್ಯವನ್ನು ಕಂಡುಹಿಡಿಯಿರಿ.
1. 1037
2. 1053
3. 1067
4. 1071

ಪ್ರ.24) ಪ್ರತಿ kg ಗೆ ₹90 ಬೆಲೆಯ 63 kg ಅಕ್ಕಿಯನ್ನು ಪ್ರತಿ kg ಗೆ ₹70 ಬೆಲೆಯ ಎಷ್ಟು ಕಿಲೋಗ್ರಾಂ ಅಕ್ಕಿಯೊಂದಿಗೆ ಬೆರೆಸಿ, ಮಿಶ್ರಣವನ್ನು ಪ್ರತಿ kg ಗೆ ₹96.60 ಬೆಲೆಯಲ್ಲಿ ಮಾರಾಟ ಮಾಡಿ 15% ಲಾಭ ಪಡೆಯಬಹುದು?
1. 27
2. 63
3. 36
4. 72

ಪ್ರ.25) ಆರು ಅಂಕಿಗಳ ಸಂಖ್ಯೆಯಾದ 348510 ಕ್ಕೆ ಯಾವ ಅತಿ ಚಿಕ್ಕ ಒಂದಂಕಿ ಸಂಖ್ಯೆಯನ್ನು ಕೂಡಿಸಿದಾಗ ಅದು 11 ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುತ್ತದೆ?
1. 9
2. 5
3. 7
4. 3

ಪ್ರ.26) ಇವುಗಳನ್ನು ಸಾಮಾನ್ಯ ಭಿನ್ನರಾಶಿಯ ರೂಪದಲ್ಲಿ ವ್ಯಕ್ತಪಡಿಸಿ.

$0.\overline{14} + 0.\overline{23} + 2$

1. $2\frac{34}{90}$
2. $2\frac{17}{9}$
3. $2\frac{11}{9}$
4. $2\frac{19}{30}$

ಪ್ರ.27) ಒಬ್ಬ ವ್ಯಕ್ತಿಯು ಒಂದು ನಿರ್ದಿಷ್ಟ ದೂರವನ್ನು 4 km/h ವೇಗದಲ್ಲಿ 7 ಗಂಟೆಗಳಲ್ಲಿ ಮತ್ತು ಇನ್ನು ಸ್ವಲ್ಪ ದೂರವನ್ನು 2 km/h ವೇಗದಲ್ಲಿ 2 ಗಂಟೆಗಳಲ್ಲಿ ಕ್ರಮಿಸುತ್ತಾನೆ. ಹಾಗಾದರೆ ಇಡೀ ಪ್ರಯಾಣದಲ್ಲಿ ಅವನ ಸರಾಸರಿ ವೇಗವನ್ನು ಕಂಡುಹಿಡಿಯಿರಿ.
1. $4\frac{5}{9}$
2. $3\frac{5}{9}$
3. $2\frac{5}{9}$
4. $5\frac{5}{9}$

ಪ್ರ.28) ನೇಹಾ ಮತ್ತು ಕಾಜಲ್ ಇಬ್ಬರೂ ಒಂದು ವ್ಯವಹಾರದಲ್ಲಿ 4 : 9 ರ ಅನುಪಾತದಲ್ಲಿ ಹೂಡಿಕೆ ಮಾಡಿದ್ದಾರೆ. ಅದರ ಒಟ್ಟು ಲಾಭವು ರೂ. 5590 ಆಗಿದ್ದರೆ, ನೇಹಾ ಮತ್ತು ಕಾಜಲ್ ಇಬ್ಬರ ಲಾಭದ ನಡುವಿನ ವ್ಯತ್ಯಾಸ (ರೂ.ಗಳಲ್ಲಿ) ಎಷ್ಟು?
1. 2300
2. 2000
3. 2200
4. 2150

ಪ್ರ.29) ಒಂದು ನೇರ ವೃತ್ತಪಾದ ಶಂಕು ಮತ್ತು ಒಂದು ನೇರ ವೃತ್ತಪಾದ ಸಿಲಿಂರಿನ ಎತ್ತರಗಳ ಅನುಪಾತ 4 : 3 ಆಗಿದೆ ಮತ್ತು ಅವುಗಳ ಪಾದಗಳ ತ್ರಿಜ್ಯಗಳ ಅನುಪಾತವು 7 : 3 ಆಗಿದೆ. ಒಂದು ವೇಳೆ ಸಿಲಿಂಡರಿನ ಘನಫಲವು 810 $cm^3$ ಆಗಿದ್ದರೆ, ಶಂಕುವಿನ ಘನಫಲ (ಛಿಟ3) ಗಳಲ್ಲಿ ಎಷ್ಟು?
1. 1955
2. 1960
3. 1961
4. 1966

ಪ್ರ.30) ಸೂರಜ್ ಅವರು ಒಂದು ದೋಣಿಯಲ್ಲಿ ಪ್ರವಾಹದ ವಿರುದ್ಧ ದಿಕ್ಕಿನಲ್ಲಿ ಸಾಗುತ್ತಾ 424 ಇಟ ದೂರವನ್ನು 48 ಗಂಟೆಗಳಲ್ಲಿ ಕ್ರಮಿಸುತ್ತಾರೆ ಮತ್ತು ಅವರು ಪ್ರವಾಹದ ದಿಕ್ಕಿನಲ್ಲಿ ಅಷ್ಟೇ ದೂರವನ್ನು ಕ್ರಮಿಸಲು 30 ಗಂಟೆಗಳನ್ನು ತೆಗೆದುಕೊಳ್ಳುತ್ತಾರೆ. ಹಾಗಾದರೆ ಪ್ರವಾಹದ ವೇಗವನ್ನು ಕಂಡುಹಿಡಿಯಿರಿ.
1. 2.65 km/h
2. 10.24 km/h
3. 8.74 km/h
4. 9.49 km/h

ಪ್ರ.31) ಒಬ್ಬ ವ್ಯಕ್ತಿಯು ಒಂದು ವಸ್ತುವಿನ ನಮೂದಿತ ಬೆಲೆಯ ಮೇಲೆ ಮೊದಲು d% ರಷ್ಟು ರಿಯಾಯಿತಿ ನೀಡಿದನು ಮತ್ತು ನಂತರ ಅಷ್ಟೇ ಮೌಲ್ಯದ (₹ ಗಳಲ್ಲಿ) ಇನ್ನೊಂದು ರಿಯಾಯಿತಿ ನೀಡಿದನು ಮತ್ತು ನಂತರ ಅದನ್ನು ₹630 ಕ್ಕೆ ಮಾರಾಟ ಮಾಡಿದನು. ಒಂದು ವೇಳೆ ಆ ವಸ್ತುವಿನ ನಮೂದಿತ ಬೆಲೆ ₹700 ಆಗಿದ್ದರೆ, d ನ ಮೌಲ್ಯ ಎಷ್ಟು?
1. 9
2. 5
3. 7
4. 8

ಪ್ರ.32) $2^{0.83} = x$, $2^{0.09} = y$ ಮತ್ತು $x^z = y^5$ ಎಂದು ನೀಡಲಾಗಿದ್ದರೆ, z ನ ಮೌಲ್ಯವು ಇದಕ್ಕೆ ಸಮೀಪವಾಗಿದೆ:
1. 0.87
2. 0.54
3. 0.93
4. 3.18

ಪ್ರ.33) ಒಂದು ವಸ್ತುವನ್ನು ಅದರ ವಾಸ್ತವಿಕ ಮಾರಾಟ ಬೆಲೆಯ $\frac{3}{8}$ ರಷ್ಟು ಬೆಲೆಗೆ ಮಾರಾಟ ಮಾಡಿದಾಗ ಶರದ್ ಅವರು 19% ನಷ್ಟ ಅನುಭವಿಸುತ್ತಾರೆ. ಒಂದು ವೇಳೆ ಅವರು ಆ


www.shikarat.com
LAXMIKANT PATIL

ವಸ್ತುವನ್ನು ಅದರ ವಾಸ್ತವಿಕ ಮಾರಾಟ ಬೆಲೆಯ 60% ರಷ್ಟು ಬೆಲೆಗೆ ಮಾರಾಟ ಮಾಡಿದ್ದರೆ ಅವರಿಗೆ ಆಗಬಹುದಾಗಿದ್ದ ಲಾಭದ ಶೇಕಡಾವಾರು ಪ್ರಮಾಣ ಎಷ್ಟು?

1. 30.6%
2. 32.3%
3. 29.6%
4. 31.9%

ಪ್ರ.34) ಚಕ್ರಬಡ್ಡಿಯನ್ನು ನೀಡುತ್ತದೆ. ಒಬ್ಬ ಗ್ರಾಹಕನು ವರ್ಷವೊಂದರ ಜನವರಿ 1 ರಂದು ಮತ್ತು ಜುಲೈ 1 ರಂದು ತಲಾ ₹1924 ಠೇವಣಿ ಇಡುತ್ತಾನೆ. ವರ್ಷದ ಕೊನೆಗೆ, ಅವನು ಬಡ್ಡಿಯ ಮೂಲಕ ಗಳಿಸಿದ ಮೊತ್ತವು ________ ಆಗಿರುತ್ತದೆ. [2 ದಶಮಾಂಶ ಸ್ಥಾನಗಳಿಗೆ ಸರಿಹೊಂದಿಸಿ ಉತ್ತರಿಸಿ.]

1. ₹249.4
2. ₹257.69
3. ₹267.87
4. ₹247.69

ಪ್ರ.35) ಒಂದು ಚೌಕಾಕಾರದ ನಿವೇಶನದ ವಿಸ್ತೀರ್ಣವು 15876 $m^2$ ಆಗಿದೆ. ಹಾಗಾದರೆ, ಜಮೀನಿನ ಪ್ರತಿಯೊಂದು ಬದಿಯ ಉದ್ದ (m ಗಳಲ್ಲಿ) ಎಷ್ಟು?

1. 126
2. 128
3. 118
4. 106

ಪ್ರ.36) G ಅವರು F ಅವರ ಮಗಳು. F ಅವರು K ಅವರ ಸಹೋದರಿ. K ಅವರು H ಅವರು ಮಗ. H ಅವರು E ಅವರ ಪತಿ. ಹಾಗಾದರೆ, G ಅವರು E ಅವರಿಗೆ ಹೇಗೆ ಸಂಬಂಧಿ?

1. ತಾಯಿಯ ತಾಯಿ
2. ಮಗಳ ಮಗ
3. ಮಗಳ ಮಗಳು
4. ತಾಯಿಯ ಸಹೋದರಿ

ಪ್ರ.37) 6384921 ಸಂಖ್ಯೆಯಲ್ಲಿನ ಪ್ರತಿಯೊಂದು ಅಂಕಿಗಳನ್ನು ಎಡದಿಂದ ಬಲಕ್ಕೆ ಏರಿಕೆ ಕ್ರಮದಲ್ಲಿ ಜೋಡಿಸಲಾಗಿದೆ. ಹೀಗೆ ರೂಪುಗೊಂಡ ಹೊಸ ಸಂಖ್ಯೆಯಲ್ಲಿ ಎಡದಿಂದ ಎರಡನೆಯ ಮತ್ತು ಬಲದಿಂದ ಎರಡನೆಯ ಅಂಕಿಗಳ ಮೊತ್ತವೆಷ್ಟು?

1. 8
2. 10
3. 7
4. 9

ಪ್ರ.38) A, B, C, D, E, F ಮತ್ತು G ಎಂಬ ಏಳು ಪೆಟ್ಟಿಗೆಗಳನ್ನು ಒಂದರ ಮೇಲೊಂದರಂತೆ ಇರಿಸಲಾಗಿದ್ದರೂ ಅವು ಒಂದೇ ಕ್ರಮದಲ್ಲಿ ಇರಬೇಕೆಂದಿಲ್ಲ. ಕೇವಲ ಮೂರು ಪೆಟ್ಟಿಗೆಗಳನ್ನು D ಯ ಕೆಳಗೆ ಇರಿಸಲಾಗಿದೆ. D ಮತ್ತು G ನಡುವೆ ಕೇವಲ ಎರಡು ಪೆಟ್ಟಿಗೆಗಳನ್ನು ಇರಿಸಲಾಗಿದೆ. ಕೇವಲ C ಅನ್ನು B ಯ ತಕ್ಷಣದ ಮೇಲೆ ಇರಿಸಲಾಗಿದೆ. A ಅನ್ನು F ನ ಕೆಳಗಿನ ಯಾವುದೋ ಸ್ಥಳದಲ್ಲಿ ಮತ್ತು E ಯ ಮೇಲಿನ ಯಾವುದೋ ಸ್ಥಳದಲ್ಲಿ ಇರಿಸಲಾಗಿದೆ. B ಯ ಮೇಲೆ ಎಷ್ಟು ಪೆಟ್ಟಿಗೆಗಳನ್ನು ಇರಿಸಲಾಗಿದೆ?\

1. 1
2. 4
3. 2
4. 3

ಪ್ರ.39) ಕೆಳಗೆ ನೀಡಲಾದ ಎರಡು ತ್ರಿವಳಿಗಳು ಅನುಸರಿಸುವ ಮಾದರಿಯನ್ನೇ ಅನುಸರಿಸುವ ತ್ರಿವಳಿಯನ್ನು ಆರಿಸಿ. ಎರಡೂ ತ್ರಿವಳಿಗಳು ಒಂದೇ ಮಾದರಿಯನ್ನು ಅನುಸರಿಸುತ್ತವೆ.

**LH-NJ-PS**
**NJ-PL-RU**

1. PL-RN-TX
2. PL-RN-TW
3. OL-RM-TX
4. OL-RN-TX

ಪ್ರ.40) ಕೊಟ್ಟಿರುವ ಸರಣಿಯಲ್ಲಿನ ಪ್ರಶ್ನಾರ್ಥಕ ಚಿಹ್ನೆಯ (?) ಸ್ಥಾನದಲ್ಲಿ ಯಾವ ಸಂಖ್ಯೆ ಬರಬೇಕು?

**38 37 40 39 42 ?**

1. 40
2. 43
3. 44
4. 41

ಪ್ರ.41) ಒಂದು ವಿಶಿಷ್ಟ ಸಂಕೇತ ಭಾಷೆಯಲ್ಲಿ 'TAIL' ಎಂಬುದನ್ನು '2463' ಎಂದು ಸಂಕೇತಿಸಲಾಗಿದೆ ಮತ್ತು 'INKS' ಎಂಬುದನ್ನು '9351' ಎಂದು ಸಂಕೇತಿಸಲಾಗಿದೆ. ಹಾಗಾದರೆ ಕೊಟ್ಟಿರುವ ಭಾಷೆಯಲ್ಲಿ, 'I' ಅನ್ನು ಹೇಗೆ ಸಂಕೇತಿಸಬಹುದು?

1. 3
2. 5
3. 6
4. 9

ಪ್ರ.42) ಒಂದುವೇಳೆ 4635748 ಸಂಖ್ಯೆಯಲ್ಲಿನ ಪ್ರತಿ ಬೆಸ ಅಂಕಿಗೆ 1 ಅನ್ನು ಕೂಡಿಸಿದರೆ ಮತ್ತು ಪ್ರತಿ ಸಮ ಅಂಕಿಯಿಂದ 2 ಅನ್ನು ಕಳೆದರೆ, ಹೀಗೆ ರೂಪುಗೊಂಡ ಹೊಸ ಸಂಖ್ಯೆಯಲ್ಲಿ ಎಡದಿಂದ ಎರಡನೇ ಮತ್ತು ಬಲದಿಂದ ಎರಡನೇ ಅಂಕಿಗಳ ಮೊತ್ತ ಎಷ್ಟು?

1. 8
2. 2
3. 6
4. 4

ಪ್ರ.43) ಒಂದು ವಿಶಿಷ್ಟ ಸಂಕೇತ ಭಾಷೆಯಲ್ಲಿ 'HUNT' ಅನ್ನು '9876' ಎಂದು ಸಂಕೇತಿಸಲಾಗಿದೆ ಮತ್ತು 'USER'



LAXMIKANT PATIL
www.shikarat.com

ಅನ್ನು '4361' ಎಂದು ಸಂಕೇತಿಸಲಾಗಿದೆ. ಅದೇ ಭಾಷೆಯಲ್ಲಿ 'U' ನ ಸಂಕೇತ ಯಾವುದು?

1. 4
2. 1
3. 6
4. 8

ಪ್ರ.44) ಇಂಗ್ಲಿಷ್ ವರ್ಣಮಾಲೆಯ ಕ್ರಮದ ಆಧಾರದ ಮೇಲೆ ಈ ಕೆಳಗಿನ ಸರಣಿಯಲ್ಲಿರುವ ಪ್ರಶ್ನಾರ್ಥಕ ಚಿಹ್ನೆಯ (?) ಜಾಗದಲ್ಲಿ ಯಾವುದು ಸರಿಹೊಂದುತ್ತದೆ?

**RTW PRU NPS LNQ ?**

1. JLP
2. JLO
3. JKP
4. JKO

ಪ್ರ.45) I, J, K, L, P, Q ಮತ್ತು R ಎಂಬ ಎಲ್ಲರೂ ಒಂದು ಚೌಕಾಕಾರದ ಮೇಜಿನ ಸುತ್ತಲೂ ಮೇಜಿನ ಮಧ್ಯಭಾಗಕ್ಕೆ ಮುಖಮಾಡಿ ಕುಳಿತಿದ್ದಾರೆ. P ಮತ್ತು J ಅವರ ನಡುವೆ ಕೇವಲ ಮೂರು ಜನರು ಕುಳಿತಿದ್ದಾರೆ. J ಅವರ ತಕ್ಷಣದ ಎಡಕ್ಕೆ Q ಅವರು ಕುಳಿತಿದ್ದಾರೆ. R ಅವರ ಬಲಕ್ಕೆ ಯಾರೂ ಕುಳಿತಿಲ್ಲ. R ಮತ್ತು Q ನಡುವೆ ಕೇವಲ ಎರಡು ಜನರು ಕುಳಿತಿದ್ದಾರೆ. I ಅವರ ತಕ್ಷಣದ ಬಲಕ್ಕೆ K ಅವರು ಕುಳಿತಿದ್ದಾರೆ. ಹಾಗಾದರೆ L ಮತ್ತು K ಅವರ ನಡುವೆ ಎಷ್ಟು ಜನರು ಕುಳಿತಿದ್ದಾರೆ?

1. ಮೂವರು
2. ಇಬ್ಬರು
3. ನಾಲ್ವರು
4. ಒಬ್ಬರು

ಪ್ರ.46) ಒಂದು ವೇಳೆ 'A' ಎಂಬುದು '÷' ಎಂದಾದರೆ, 'B' ಎಂಬುದು 'x' ಎಂದಾದರೆ, 'C' ಎಂಬುದು '+' ಎಂದಾದರೆ ಮತ್ತು 'D' ಎಂಬುದು '-' ಎಂದಾದರೆ, ಈ ಕೆಳಗಿನ ಸಮೀಕರಣದಲ್ಲಿನ ಪ್ರಶ್ನಾರ್ಥಕ ಚಿಹ್ನೆಯ '?' ಸ್ಥಾನದಲ್ಲಿ ಯಾವುದು ಸರಿಹೊಂದುತ್ತದೆ? **(64 A 4) C 28 D 20 C (46 A 23) B 7 C 19 = ?**

1. 69
2. 76
3. 57
4. 41

ಪ್ರ.47) ಪ್ರಶ್ನೆಯು ಕೆಳಗೆ ನೀಡಲಾದ ಮೂರು ಅಂಕಿಯ ಐದು ಸಂಖ್ಯೆಗಳನ್ನು ಆಧರಿಸಿದೆ.

(ಎಡ) **682 745 524 617 539** ((ಬಲ)

(ಉದಾಹರಣೆ: 697 – ಮೊದಲ ಅಂಕಿ = 6, ಎರಡನೇ ಅಂಕಿ = 9 ಮತ್ತು ಮೂರನೇ ಅಂಕಿ = 7)

(ಸೂಚನೆ: ಎಲ್ಲಾ ಕ್ರಿಯೆಗಳನ್ನು ಎಡದಿಂದ ಬಲಕ್ಕೆ ಮಾಡಬೇಕು.)

ಎರಡನೇ ಅತಿ ದೊಡ್ಡ ಸಂಖ್ಯೆಯ ಮೂರನೇ ಅಂಕಿಯನ್ನು, ಅತಿ ಚಿಕ್ಕ ಸಂಖ್ಯೆಯ ಎರಡನೇ ಅಂಕಿಗೆ ಕೂಡಿಸಿದರೆ ಸಿಗುವ ಸಂಖ್ಯೆ ಯಾವುದು?

1. 2
2. 4
3. 5
4. 3

ಪ್ರ.48) ಕೊಟ್ಟಿರುವ ಹೇಳಿಕೆಗಳು ಮತ್ತು ತೀರ್ಮಾನಗಳನ್ನು ಗಮನವಿಟ್ಟು ಓದಿರಿ. ಹೇಳಿಕೆಗಳಲ್ಲಿ ನೀಡಲಾದ ಮಾಹಿತಿಯು ವಾಸ್ತವಕ್ಕಿಂತ ಭಿನ್ನವಾಗಿ ಕಂಡರೂ ಅವುಗಳನ್ನು ಸರಿಯಾಗಿದೆಯೆಂದು ಭಾವಿಸಿ, ಕೊಟ್ಟಿರುವ ತೀರ್ಮಾನಗಳಲ್ಲಿ ಯಾವ ತೀರ್ಮಾನ(ಗಳು) ಹೇಳಿಕೆಗಳನ್ನು ತಾರ್ಕಿಕವಾಗಿ ಅನುಸರಿಸುತ್ತದೆ(ವೆ) ಎಂಬುದನ್ನು ನಿರ್ಧರಿಸಿ.

ಹೇಳಿಕೆಗಳು:

ಎಲ್ಲಾ ವೇಫರ್‌ಗಳು ಮಿಠಾಯಿಗಳು.

ಎಲ್ಲಾ ಮಿಠಾಯಿಗಳು ಬಿಸ್ಕತ್ತುಗಳು.

ಕೆಲವು ವೇಫರ್‌ಗಳು ಜ್ಯೂಸ್‌ಗಳು.

ತೀರ್ಮಾನಗಳು:

(I): ಕೆಲವು ಮಿಠಾಯಿಗಳು ಜ್ಯೂಸ್‌ಗಳು.

(II): ಕೆಲವು ಬಿಸ್ಕತ್ತುಗಳು ಜ್ಯೂಸ್‌ಗಳು.

1. ತೀರ್ಮಾನಗಳಾದ (I) ಮತ್ತು (II) ಎರಡೂ ಅನುಸರಿಸುತ್ತವೆ.
2. ತೀರ್ಮಾನ (I) ಅಥವಾ (II) ಯಾವುದೂ ಅನುಸರಿಸುವುದಿಲ್ಲ
3. ತೀರ್ಮಾನ (II) ಮಾತ್ರ ಅನುಸರಿಸುತ್ತದೆ.
4. ತೀರ್ಮಾನ (I) ಮಾತ್ರ ಅನುಸರಿಸುತ್ತದೆ.

ಪ್ರ.49) ಎಲ್ಲಾ 91 ಜನರು ಉತ್ತರಕ್ಕೆ ಮುಖ ಮಾಡಿ ಒಂದು ಸಾಲಿನಲ್ಲಿ ನಿಂತಿದ್ದಾರೆ. Fi ಬಲ ತುದಿಯಿಂದ 12 ನೇ ಸ್ಥಾನದಲ್ಲಿದ್ದರೆ, Yu ಎಡ ತುದಿಯಿಂದ 86 ನೇ ಸ್ಥಾನದಲ್ಲಿದ್ದಾರೆ. ಹಾಗಾದರೆ Fi ಮತ್ತು Yu ನಡುವೆ ಎಷ್ಟು ಜನರಿದ್ದಾರೆ?

1. 6
2. 3
3. 4
4. 5

ಪ್ರ.50) ಈ ಕೆಳಗೆ ಕೊಟ್ಟಿರುವ 3 ಚಿತ್ರಗಳು ಅವುಗಳಲ್ಲಿನ ಕೆಲವು ವೈಶಿಷ್ಟ್ಯಗಳಿಂದಾಗಿ ಒಂದೇ ರೀತಿಯಲ್ಲಿ ಇವೆ. ಕೊಟ್ಟಿರುವ ಚಿತ್ರಗಳಲ್ಲಿ ಅದೇ ರೀತಿಯಲ್ಲಿರುವ ವೈಶಿಷ್ಟ್ಯಗಳನ್ನು ಹೊಂದಿರುವ ಆಯ್ಕೆಯನ್ನು ಆರಿಸಿ.



LAXMIKANT PATIL



www.shikarat.com



ಪ್ರ.51) ಎಲ್ಲಾ 47 ಜನರು ಉತ್ತರಕ್ಕೆ ಮುಖ ಮಾಡಿ ಒಂದು ಸಾಲಿನಲ್ಲಿ ನಿಂತಿದ್ದಾರೆ. ಸೀಮಾ ಅವರು ಬಲ ತುದಿಯಿಂದ 22 ನೇ ಸ್ಥಾನದಲ್ಲಿದ್ದರೆ ಹಾಗೂ ಬಿನಿ ಅವರು ಎಡ ತುದಿಯಿಂದ 31 ನೇ ಸ್ಥಾನದಲ್ಲಿದ್ದಾರೆ. ಹಾಗಾದರೆ ಸೀಮಾ ಮತ್ತು ಬಿನಿ ನಡುವೆ ಎಷ್ಟು ಜನರಿದ್ದಾರೆ?

1. 1
2. 4
3. 3
4. 2

ಪ್ರ.52) ಈ ಕೆಳಗಿನ ಸರಣಿಯಲ್ಲಿರುವ ಪ್ರಶ್ನಾರ್ಥಕ ಚಿಹ್ನೆಯ (?) ಜಾಗದಲ್ಲಿ ಹಾಕಿದಾಗ ಸರಣಿ ಪೂರ್ಣಗೊಳಿಸಬಲ್ಲ ಪದವನ್ನು ಕೊಟ್ಟಿರುವ ಆಯ್ಕೆಗಳಿಂದ ಆರಿಸಿ.

**FNT -1 HPP -3 ? LTH -27 NVD -81**

1. GFT -5
2. LKV -7
3. KHF -8
4. JRL -9

ಪ್ರ.53) ಇಂಗ್ಲಿಷ್ ವರ್ಣಮಾಲೆಯ ಕ್ರಮವನ್ನು ಆಧರಿಸಿ, ಈ ಕೆಳಗಿನ ನಾಲ್ಕು ಅಕ್ಷರಗಳ ಗುಚ್ಛ ಜೋಡಿಗಳ ಪೈಕಿ ಮೂರು ಅಕ್ಷರ ಗುಚ್ಛಗಳು ಒಂದು ವಿಶಿಷ್ಟ ರೀತಿಯಲ್ಲಿ ಸದೃಶವಾಗಿದೆ. ಮತ್ತು ಹೀಗಾಗಿ ಅವು ಒಂದೇ ಗುಂಪಿಗೆ ಸೇರುತ್ತವೆ. ಹಾಗಾದರೆ, ಈ ಕೆಳಗಿನ ಯಾವ ಜೋಡಿಯು ಆ ಗುಂಪಿಗೆ ಸೇರುವುದಿಲ್ಲ?
(ಸೂಚನೆ: ಗುಂಪಿಗೆ ಸೇರದ ಅಕ್ಷರ ಗುಚ್ಛವು ಅದರಲ್ಲಿನ ವ್ಯಂಜನಗಳು/ಸ್ವರಾಕ್ಷರಗಳ ಸಂಖ್ಯೆ ಅಥವಾ ಅಕ್ಷರ ಗುಚ್ಛದಲ್ಲಿನ ಅವುಗಳ ಸ್ಥಾನಗಳನ್ನು ಆಧರಿಸಿಲ್ಲ.)

1. NRY
2. BFL
3. JNT
4. FJP

ಪ್ರ.54) ಕೆಳಗಿನ ನಾಲ್ಕು ಅಕ್ಷರ ಗುಚ್ಛಗಳಲ್ಲಿ ಮೂರು ಅಕ್ಷರ ಗುಚ್ಛಗಳು ಒಂದು ವಿಶಿಷ್ಟ ರೀತಿಯಲ್ಲಿ ಸದೃಶ್ಯವಾಗಿವೆ ಹಾಗಾಗಿ ಅವು ಒಂದೇ ಗುಂಪಿಗೆ ಸೇರುತ್ತವೆ. ಆ ಗುಂಪಿಗೆ ಸೇರದ ಅಕ್ಷರ ಗುಚ್ಛ ಯಾವುದು?
(ಸೂಚನೆ: ಗುಂಪಿಗೆ ಸೇರದ ಅಕ್ಷರ ಗುಚ್ಛವು ಅದರಲ್ಲಿನ ವ್ಯಂಜನ/ಸ್ವರಗಳ ಸಂಖ್ಯೆ ಅಥವಾ ಅಕ್ಷರ ಗುಚ್ಛದಲ್ಲಿನ ಅವುಗಳ ಸ್ಥಾನವನ್ನು ಆಧರಿಸಿಲ್ಲ)

1. XO - RU
2. OF - IM
3. UL - OS
4. RI - LP

ಪ್ರ.55) CLAUSE ಎಂಬ ಪದದ ಪ್ರತಿಯೊಂದು ಅಕ್ಷರಗಳನ್ನು ಇಂಗ್ಲಿಷ್ ವರ್ಣಮಾಲೆಯ ಕ್ರಮದಲ್ಲಿ ಅವುಗಳ ತಕ್ಷಣದ ಮುಂದೆ ಬರುವ ಅಕ್ಷರಗಳಿಗೆ ಬದಲಾಯಿಸಲಾಗುತ್ತದೆ ಮತ್ತು ನಂತರ ಹೀಗೆ ರೂಪುಗೊಂಡ ಎಲ್ಲಾ ಅಕ್ಷರಗಳನ್ನು ಇಂಗ್ಲಿಷ್ ವರ್ಣಮಾಲೆಯ ಕ್ರಮದಲ್ಲಿ ಜೋಡಿಸಲಾಗುತ್ತದೆ. ಹೀಗೆ ರೂಪುಗೊಂಡ ಹೊಸ ಅಕ್ಷರಗಳ ಗುಂಪಿನಲ್ಲಿ ಈ ಕೆಳಗಿನವುಗಳಲ್ಲಿ ಯಾವ ಅಕ್ಷರವು ಬಲಗಡೆಯಿಂದ ಮೂರನೆಯದಾಗಿರುತ್ತದೆ?

1. T
2. M
3. V
4. F

ಪ್ರ.56) ಒಂದು ವಿಶಿಷ್ಟ ಸಂಕೇತ ಭಾಷೆಯಲ್ಲಿ 'SPAM' ಎಂಬುದನ್ನು '4592' ಎಂದು ಸಂಕೇತಿಸಲಾಗಿದೆ ಮತ್ತು 'TAPS' ಎಂಬುದನ್ನು '5412' ಎಂದು ಸಂಕೇತಿಸಲಾಗಿದೆ. ಅದೇ ಭಾಷೆಯಲ್ಲಿ 'T' ಎಂಬುದನ್ನು ಹೇಗೆ ಸಂಕೇತಿಸಲಾಗಿದೆ?

1. 4
2. 5
3. 2
4. 1

ಪ್ರ.57) ಒಂದು ನಿರ್ದಿಷ್ಟ ತರ್ಕವನ್ನು ಅನುಸರಿಸಿ 29 ಎಂಬುದು 118 ಕ್ಕೆ ಸಂಬಂಧಿಸಿದೆ. ಅದೇ ತರ್ಕವನ್ನು ಅನುಸರಿಸಿ 10 ಎಂಬುದು 42 ಕ್ಕೆ ಸಂಬಂಧಿಸಿದೆ. ಹಾಗಾದರೆ ಅದೇ ತರ್ಕವನ್ನು ಅನುಸರಿಸಿದಾಗ 13 ಎಂಬುದು ಈ ಕೆಳಗಿನವುಗಳಲ್ಲಿ ಯಾವುದಕ್ಕೆ ಸಂಬಂಧಿಸಿದೆ?
(ಸೂಚನೆ: ಸಂಖ್ಯೆಗಳನ್ನು ಅವುಗಳ ಬಿಡಿ ಅಂಕಿಗಳಾಗಿ ವಿಭಜಿಸದೆ, ಪೂರ್ಣ ಸಂಖ್ಯೆಗಳ ಮೇಲೆ ಗಣಿತದ ಕ್ರಿಯೆಗಳನ್ನು ಮಾಡಬೇಕು. ಉದಾ; 13 – 13ಕ್ಕೆ ಕೂಡಿಸುವುದು/ಕಳೆಯುವುದು/ಗುಣಿಸುವುದು ಮುಂತಾದ ಕ್ರಿಯೆಗಳನ್ನು 13ರ ಮೇಲೆಯೇ ಮಾಡಬೇಕು. 13 ಅನ್ನು 1 ಮತ್ತು 3 ಎಂದು ವಿಭಜಿಸಿ ನಂತರ 1 ಮತ್ತು 3ರ ಮೇಲೆ ಬೇರೆಬೇರೆಯಾಗಿ ಗಣಿತದ ಕ್ರಿಯೆಗಳನ್ನು ಮಾಡುವಂತಿಲ್ಲ.)

1. 54
2. 52
3. 56
4. 51

ಪ್ರ.58) ಕೆಳಗೆ ಕೊಟ್ಟಿರುವ ಎರಡು ಜೋಡಿಗಳು ಯಾವ ಮಾದರಿಯನ್ನು ಅನುಸರಿಸುತ್ತವೆಯೋ ಅದೇ ಮಾದರಿಯನ್ನು ಅನುಸರಿಸುವ ಜೋಡಿಯನ್ನು ಕೊಟ್ಟಿರುವ ಆಯ್ಕೆಗಳಿಂದ ಆರಿಸಿ. ಕೆಳಗಿನ ಎರಡೂ ಜೋಡಿಗಳು ಒಂದೇ ಮಾದರಿಯನ್ನು ಅನುಸರಿಸುತ್ತವೆ.

**QRU : NTS**
**KVQ : HXO**

1. EZM : BBK
2. SMY : QNX
3. WKA : ULZ
4. KAQ : HCT

LAXMIKANT PATIL



www.shikarat.com

**RPF SI 2024 ಅಧಿಕೃತ ಪ್ರಶ್ನೆಪತ್ರಿಕೆಗಳು**

ಪ್ರ.59) ಒಂದು ವಿಶಿಷ್ಟ ತರ್ಕವನ್ನು ಆಧರಿಸಿ 12 ಎಂಬುದು 192ಕ್ಕೆ ಸಂಬಂಧಿಸಿದೆ. ಅದೇ ತರ್ಕವನ್ನು ಅನುಸರಿಸಿ 17 ಎಂಬುದು 272 ಕ್ಕೆ ಸಂಬಂಧಿಸಿದೆ. ಅದೇ ತರ್ಕವನ್ನು ಅನುಸರಿಸಿದಾಗ 24 ಎಂಬುದು ಈ ಕೆಳಗಿನವುಗಳಲ್ಲಿ ಯಾವುದಕ್ಕೆ ಸಂಬಂಧಿಸಿದೆ ?
(ಸೂಚನೆ: ಸಂಖ್ಯೆಗಳನ್ನು ಅವುಗಳ ಬಿಡಿ ಅಂಕಿಗಳಾಗಿ ವಿಭಜಿಸದೆ, ಪೂರ್ಣ ಸಂಖ್ಯೆಗಳ ಮೇಲೆ ಗಣಿತದ ಕ್ರಿಯೆಗಳನ್ನು ಮಾಡಬೇಕು. ಉದಾ; 13 – 13ಕ್ಕೆ ಕೂಡುವುದು/ಕಳೆಯುವುದು/ಗುಣಿಸುವುದು ಮುಂತಾದ ಕ್ರಿಯೆಗಳನ್ನು 13ರ ಮೇಲೆಯೇ ಮಾಡಬೇಕು. 13 ಅನ್ನು 1 ಮತ್ತು 3 ಎಂದು ವಿಭಜಿಸಿ ನಂತರ 1 ಮತ್ತು 3 ರ ಮೇಲೆ ಬೇರೆಬೇರೆಯಾಗಿ ಗಣಿತದ ಕ್ರಿಯೆಗಳನ್ನು ಮಾಡುವಂತಿಲ್ಲ.)

1. 384
2. 404
3. 394
4. 374

ಪ್ರ.60) W, X, Y, Z, T ಮತ್ತು U ಎಂಬ ಹೆಸರಿನ ಆರು ಜನರಲ್ಲಿ ಪ್ರತಿಯೊಬ್ಬರೂ ಬೇರೆ ಬೇರೆ ವಯಸ್ಸಿನವರಾಗಿದ್ದಾರೆ. W ಅವರ ವಯಸ್ಸು 40 ಆಗಿದೆ. Y ಅವರ ವಯಸ್ಸು T ಅವರ ವಯಸ್ಸಿನ ನಾಲ್ಕನೇ ಒಂದರಷ್ಟಿದೆ. Z ಅವರ ವಯಸ್ಸು U ಅವರ ವಯಸ್ಸಿನ ನಾಲ್ಕು ಪಟ್ಟುಆಗಿದೆ. T ಅವರ ವಯಸ್ಸು Z ಅವರ ವಯಸ್ಸಿನ ಐದು ಪಟ್ಟು ಆಗಿದೆ. W ಅವರ ವಯಸ್ಸು Y ಅವರ ವಯಸ್ಸಿನ ಎರಡು ಪಟ್ಟು ಆಗಿದೆ. ಒಂದು ವೇಳೆ U ಅವರ ವಯಸ್ಸು X ಅವರ ವಯಸ್ಸಿನ ಮೂರನೇ ಒಂದರಷ್ಟಿದ್ದರೆ, X ಅವರ ವಯಸ್ಸು ಎಷ್ಟು?

1. 18
2. 24
3. 15
4. 12

ಪ್ರ.61) ಈ ಕೆಳಗಿನ ಅಕ್ಷರ, ಸಂಕೇತ ಸರಣಿಯನ್ನು ಗಮನಿಸಿ ಮತ್ತು ಆ ಬಳಿಕ ನೀಡಲಾದ ಪ್ರಶ್ನೆಗೆ ಉತ್ತರಿಸಿ.
(ಎಣಿಕೆಯನ್ನು ಎಡದಿಂದ ಬಲಕ್ಕೆ ಮಾತ್ರ ಮಾಡಬೇಕು)

(ಎಡ) 3 Ω 9 $ 7 6 @ 5 1 * # % & 8 2 + 4 £ (ಬಲ)

ಒಂದು ವೇಳೆ ಸರಣಿಯಲ್ಲಿನ ಎಲ್ಲಾ ಸಂಕೇತಗಳನ್ನು ಕೈ ಬಿಟ್ಟರೆ, ಈ ಕೆಲಗಿನವುಗಳಲ್ಲಿ ಯಾವುದು ಬಲದಿಂದ ಐದನೆಯದಾಗಿರುತ್ತದೆ?

1. 8
2. 6
3. 5
4. 7

ಪ್ರ.62) A, B, C, D, E, F ಮತ್ತು G ಎಂಬ ಏಳು ಜನರು ಒಂದು ವೃತ್ತಾಕಾರದ ಮೇಜಿನ ಸುತ್ತಲೂ ಮೇಜಿನ ಮಧ್ಯಭಾಗಕ್ಕೆ ಮುಖ ಮಾಡಿ ಕುಳಿತಿದ್ದಾರೆ. F ಅವರು G ಅವರ ತಕ್ಷಣದ ಎಡಕ್ಕೆ ಕುಳಿತಿದ್ದಾರೆ. E ಅವರು C ಅವರ ತಕ್ಷಣದ ಎಡಕ್ಕೆ ಕುಳಿತಿದ್ದಾರೆ. C ಅವರು A ಅವರ ಎಡದಿಂದ ಎರಡನೆ ಸ್ಥಾನದಲ್ಲಿ ಕುಳಿತಿದ್ದಾರೆ. B ಅವರು G ಅವರ ಎಡದಿಂದ ಮೂರನೆ ಸ್ಥಾನದಲ್ಲಿ ಕುಳಿತಿದ್ದಾರೆ. E ಅವರ ಎಡದಿಂದ ಎಣಿಸಿದಾಗ F ಮತ್ತು E ಅವರ ನಡುವೆ ಎಷ್ಟು ಜನರು ಕುಳಿತಿದ್ದಾರೆ?

1. 1
2. 3
3. 2
4. 4

ಪ್ರ.63) ಈ ಕೆಳಗೆ ಕೊಟ್ಟಿರುವ ಚಿತ್ರ ಸರಣಿಯಲ್ಲಿನ ಪ್ರಶ್ನಾರ್ಥಕ ಚಿಹ್ನೆಯ (?) ಜಾಗದಲ್ಲಿ ಹಾಕಿದಾಗ ಚಿತ್ರ ಸರಣಿಯ ವಿನ್ಯಾಸವನ್ನು ತಾರ್ಕಿಕವಾಗಿ ಪೂರ್ಣಗೊಳಿಸಬಲ್ಲ ಚಿತ್ರವನ್ನು ಕೊಟ್ಟಿರುವ ಆಯ್ಕೆಗಳಿಂದ ಗುರುತಿಸಿ.





ಪ್ರ.64) ಒಂದು ವಿಶಿಷ್ಟ ಸಂಕೇತ ಭಾಷೆಯಲ್ಲಿ,
A + B ಎಂದರೆ 'A ಅವರು B ಅವರ ಮಗಳು',
A – B ಎಂದರೆ 'A ಅವರು B ಅವರ ಸಹೋದರ',
A × B ಎಂದರೆ 'A ಅವರು B ಅವರ ಪತ್ನಿ',
ಮತ್ತು A % B ಎಂದರೆ 'A ಅವರು B ಅವರ ತಂದೆ'.
ಒಂದು ವೇಳೆ 'S + D × F – G % H'
ಆಗಿದ್ದರೆ, S ಅವರು H ಅವರಿಗೆ ಹೇಗೆ ಸಂಬಂಧಿ?

1. ತಾಯಿಯ ಸಹೋದರನ ಪತ್ನಿ
2. ತಾಯಿಯ ಸಹೋದರನ ಮಗಳು
3. ತಂದೆಯ ಸಹೋದರನ ಮಗಳು
4. ತಂದೆಯ ಸಹೋದರನ ಪತ್ನಿ

ಪ್ರ.65) ಈ ಕೆಳಗಿನ ತ್ರಿವಳಿಗಳಲ್ಲಿ, ಪ್ರತಿಯೊಂದು ಅಕ್ಷರಗಳ ಗುಂಪು ಒಂದು ನಿರ್ದಿಷ್ಟ ತರ್ಕವನ್ನು ಅನುಸರಿಸಿ ಅದರ ಮುಂದಿನ ಅಕ್ಷರಗಳ ಗುಂಪಿಗೆ ಸಂಬಂಧಿಸಿದೆ. ಹಾಗಾದರೆ ಕೊಟ್ಟಿರುವ ಆಯ್ಕೆಗಳಿಂದ, ಅದೇ ತರ್ಕವನ್ನು ಅನುಸರಿಸುವ ಆಯ್ಕೆಯನ್ನು ಆರಿಸಿ.

**PLOT - LTOP - TOLP**
**BEAN - ENAB - NAEB**

1. CRAP - RPAC - PARC
2. WEST - WSET - TSEW
3. QUIT - UQIT - TUIQ
4. TOWN - OTWN - NOWT

ಪ್ರ.66) ಈ ಕೆಳಗಿನ ನಾಲ್ಕು ಅಕ್ಷರಗಳ ಗುಚ್ಛ ಜೋಡಿಗಳ ಪೈಕಿ ಮೂರು ಅಕ್ಷರ ಗುಚ್ಛಗಳು ಒಂದು ವಿಶಿಷ್ಟ ರೀತಿಯಲ್ಲಿ


www.shikarat.com

ಸದೃಶವಾಗಿದೆ. ಮತ್ತು ಹೀಗಾಗಿ ಅವು ಒಂದೇ ಗುಂಪಿಗೆ ಸೇರುತ್ತವೆ. ಹಾಗಾದರೆ, ಈ ಕೆಳಗಿನ ಯಾವ ಜೋಡಿಯು ಆ ಗುಂಪಿಗೆ ಸೇರುವುದಿಲ್ಲ? (ಗಮನಿಸಿ: ಗುಂಪಿಗೆ ಸೇರದ ಅಕ್ಷರ ಗುಚ್ಛವು ಅದರಲ್ಲಿನ ವ್ಯಂಜನಗಳು/ಸ್ವರಗಳ ಸಂಖ್ಯೆ ಅಥವಾ ಅಕ್ಷರ ಗುಚ್ಛದಲ್ಲಿನ ಅವುಗಳ ಸ್ಥಾನಗಳನ್ನು ಆಧರಿಸಿಲ್ಲ).

1. IL - PS
2. MR - UN
3. CF - JM
4. PS - WZ

ಪ್ರ.67) ರಾಬರ್ಟ್ ಅವರು **A** ಬಿಂದುವಿನಿಂದ ವಾಹನ ಚಲಾಯಿಸಲು ಆರಂಭಿಸಿ ದಕ್ಷಿಣದ ಕಡೆಗೆ **6 km** ಸಾಗುತ್ತಾರೆ. ನಂತರ ಅವರು ಎಡ ತಿರುವು ತೆಗೆದುಕೊಂಡು **8 km** ಚಲಾಯಿಸುತ್ತಾರೆ. ನಂತರ ಅವರು ಎಡ ತಿರುವು ತೆಗೆದುಕೊಂಡು **2 km** ಚಲಾಯಿಸುತ್ತಾರೆ. ನಂತರ ಅವರು ಎಡ ತಿರುವು ತೆಗೆದುಕೊಂಡು **5 km** ಚಲಾಯಿಸುತ್ತಾರೆ. ಅಂತಿಮವಾಗಿ ಅವರು ಬಲ ತಿರುವು ತೆಗೆದುಕೊಂಡು **4 km** ಸಾಗಿ, **B** ಬಿಂದುವಿನಲ್ಲಿ ನಿಲ್ಲುತ್ತಾರೆ. ಹಾಗಾದರೆ, ಅವರು **A** ಬಿಂದುವನ್ನು ಮರಳಿ ತಲುಪಲು ಎಷ್ಟು ದೂರ (ಅತ್ಯಂತ ಕಡಿಮೆ ಅಂತರದ) ಮತ್ತು ಯಾವ ದಿಕ್ಕಿನಲ್ಲಿ ವಾಹನ ಚಲಾಯಿಸಬೇಕಿದೆ?
(ನಿರ್ದಿಷ್ಟವಾಗಿ ಸೂಚಿಸಿದ ಹೊರತು ಎಲ್ಲಾ ತಿರುವುಗಳು 90ಲಿ ತಿರುವುಗಳಾಗಿವೆ.)

1. ಪಶ್ಚಿಮದ ಕಡೆಗೆ 3 km
2. ಪಶ್ಚಿಮದ ಕಡೆಗೆ 5 km
3. ಪೂರ್ವದ ಕಡೆಗೆ 3 km
4. ದಕ್ಷಿಣದ ಕಡೆಗೆ 5 km

ಪ್ರ.68) ರುದ್ರನು **A** ಬಿಂದುವಿನಿಂದ ಪ್ರಾರಂಭಿಸಿ ಪಶ್ಚಿಮಕ್ಕೆ **13 km** ಚಲಿಸುತ್ತಾನೆ. ನಂತರ ಅವನು ಎಡಕ್ಕೆ ತಿರುಗಿ, **12 km** ಚಲಿಸುತ್ತಾನೆ ಎಡಕ್ಕೆ ತಿರುಗಿ **15 km** ಚಲಿಸುತ್ತಾನೆ. ನಂತರ ಅವರು ಎಡಕ್ಕೆ ತಿರುಗಿ **14 km** ಚಲಿಸುತ್ತಾನೆ. ಅವನು ಕೊನೆಯ ಬಾರಿ ಎಡಕ್ಕೆ ತಿರುಗಿ, **2 km** ಚಲಿಸುತ್ತಾನೆ ಮತ್ತು **P** ಬಿಂದುವಿನಲ್ಲಿ ನಿಲ್ಲುತ್ತಾನೆ. **A** ಬಿಂದುವನ್ನು ಮರಳಿ ತಲುಪಲು ಅವನು ಎಷ್ಟು ದೂರ (ಕಡಿಮೆ ದೂರ) ಮತ್ತು ಯಾವ ದಿಕ್ಕಿನತ್ತ ಚಲಿಸಬೇಕು?
(ನಿರ್ದಿಷ್ಟವಾಗಿ ಸೂಚಿಸಿದ ಹೊರತು ಎಲ್ಲಾ ತಿರುವುಗಳು 90ಲಿ ತಿರುವುಗಳಾಗಿವೆ.)

1. 4 km ದಕ್ಷಿಣಕ್ಕೆ
2. 3 km ದಕ್ಷಿಣಕ್ಕೆ
3. 1 km ದಕ್ಷಿಣಕ್ಕೆ
4. 2 km ದಕ್ಷಿಣಕ್ಕೆ

ಪ್ರ.69) ಈ ಕೆಳಗೆ ತೋರಿಸಿರುವಂತೆ **MN** ಜಾಗದಲ್ಲಿ ಒಂದು ಕನ್ನಡಿಯನ್ನು ಇಟ್ಟಾಗ, ಕನ್ನಡಿಯಲ್ಲಿ ಕಾಣುವ ಕೊಟ್ಟಿರುವ ಚಿತ್ರದ ಸರಿಯಾದ ಪ್ರತಿಬಿಂಬ ಚಿತ್ರವನ್ನು ಆಯ್ಕೆಮಾಡಿ.




ಪ್ರ.70) ಈ ಕೆಳಗಿನ ಅಕ್ಷರ, ಸಂಖ್ಯೆ ಮತ್ತು ಸಂಕೇತ ಸರಣಿಯನ್ನು ಓದಿರಿ ಮತ್ತು ಈ ಕೆಳಗಿನ ಪ್ರಶ್ನೆಗೆ ಉತ್ತರಿಸಿ. ಎಣಿಕೆಯನ್ನು ಕೇವಲ ಎಡದಿಂದ ಬಲಕ್ಕೆ ಮಾಡಬೇಕು.
(ಎಡ) **4 @ 6 K & 2 R G C & T % 7 D Y # 3 5 E * S** (ಬಲ)
ಪ್ರತಿಯೊಂದೂ ತನ್ನ ತಕ್ಷಣದ ಹಿಂದೆ ಒಂದು ಅಕ್ಷರವನ್ನು ಮತ್ತು ತಕ್ಷಣದ ಮುಂದೆ ಸಂಖ್ಯೆಯನ್ನು ಕೂಡ ಹೊಂದಿರುವಂಥ ಎಷ್ಟು ಸಂಕೇತಗಳು ಇಲ್ಲಿವೆ?

1. 5
2. 4
3. 3
4. 2

ಪ್ರ.71) ಭಾರತ ಮತ್ತು ಜಾಗತಿಕವಾಗಿ ಎರಡರಲ್ಲೂ ಸ್ಟಾಕ್ ಟ್ರೇಡಿಂಗ್, ವಿವಿಧ ಹೂಡಿಕೆಗಳು ಮತ್ತು ಸೇವಣೆಗಳು, ಧನಸಹಾಯ ಉಪಕ್ರಮಗಳು ಮತ್ತು ಸಾಲ ಹಣ ರವಾನೆಗಳಂತಹ ಹಣಕಾಸು ಚಟುವಟಿಕೆಗಳನ್ನು ಬೆಂಬಲಿಸುವ ಆರ್ಥಿಕ ಮೂಲಸೌಕರ್ಯ ವ್ಯವಸ್ಥೆಯನ್ನು ಗುರುತಿಸಿ.

1. ಬ್ರೋಕರೇಜ್ ಸಂಸ್ಥೆಗಳು
2. ವಿಮಾ ಕ್ಷೇತ್ರಗಳು
3. ಆಸ್ತಿ ನಿರ್ವಹಣಾ ಕಂಪನಿಗಳು (AMC)
4. ಬ್ಯಾಂಕಿಂಗ್ ಸಂಸ್ಥೆಗಳು

ಪ್ರ.72) ಕರ್ನಾಟಕ ಸಂಗೀತ ಪ್ರದರ್ಶನಗಳಲ್ಲಿ ಸಾಮಾನ್ಯವಾಗಿ ಬಳಸುವ 'ಘಟಂ' ಎಂಬ ಪದವು ಯಾವ ತಾಳವಾದ್ಯವನ್ನು ಸೂಚಿಸುತ್ತದೆ?

1. ತಂಬೂರಿ
2. ಡ್ರಮ್
3. ತಾಳ (Cymbals)
4. ಮಡಕೆ

ಪ್ರ.73) ಈ ಕೆಳಗಿನ ಯಾವುದು ಸವನ್ನಾ ಪರಿಸರ ವ್ಯವಸ್ಥೆಯಲ್ಲಿನ ಮೂಲಾಧಾರ ಪ್ರಭೇದವಾಗಿದೆ?

1. ಸಿಂಹ
2. ಜೀಬ್ರಾ
3. ಜಿರಾಫೆ
4. ಆನೆ

LAXMIKANT PATIL


www.shikarat.com

RPF SI 2024 ಅಧಿಕೃತ ಪ್ರಶ್ನೆಪತ್ರಿಕೆಗಳು

**ಪ್ರ.74) ಭಾರತ ಸರ್ಕಾರವು ಪ್ರಾರಂಭಿಸಿದ 'ನವ ಭಾರತ ಸಾಕ್ಷರತಾ ಕಾರ್ಯಕ್ರಮ'ದಲ್ಲಿ ಯಾವ ವಯೋಮಾನದವರನ್ನು ಒಳಗೊಳ್ಳುವ ಗುರಿಯನ್ನು ಹೊಂದಲಾಗಿದೆ?**
1. 15 ವರ್ಷ ಮತ್ತು ಅದಕ್ಕಿಂತ ಮೇಲ್ಪಟ್ಟವರು
2. 15 ವರ್ಷ ಮತ್ತು ಅದಕ್ಕಿಂತ ಕಡಿಮೆ
3. 7 ವರ್ಷ ಮತ್ತು ಅದಕ್ಕಿಂತ ಮೇಲ್ಪಟ್ಟವರು
4. 25 ವರ್ಷ ಮತ್ತು ಅದಕ್ಕಿಂತ ಕಡಿಮೆ ವಯಸ್ಸಿನವರು

**ಪ್ರ.75) ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು ______ಅನ್ನು ಭಾರತದ ಮೊದಲ ಕೃತಕ ಉಪಗ್ರಹವಾಗಿ ಬಾಹ್ಯಾಕಾಶಕ್ಕೆ ಉಡಾವಣೆ ಮಾಡಿತ್ತು.**
1. ರಿಸೋರ್ಸ್ ಸ್ಯಾಟ್
2. ಸ್ಕ್ಯಾಟ್ ಸ್ಯಾಟ್
3. ಭಾಸ್ಕರ
4. ಆರ್ಯಭಟ

**ಪ್ರ.76) ಲಕ್ನೋ ಮತ್ತು ಗಾಜಿಪುರವನ್ನು ಸಂಪರ್ಕಿಸುವ ಉತ್ತರ ಪ್ರದೇಶದ ಪೂರ್ವಾಂಚಲ ಎಕ್ಸ್ ಪ್ರೆಸ್ ಹೆದ್ದಾರಿಯನ್ನು ಭಾರತದ ಪ್ರಧಾನ ಮಂತ್ರಿಯವರು ಯಾವ ವರ್ಷದಲ್ಲಿ ಉದ್ಘಾಟಿಸಿದರು?**
1. 2023
2. 2018
3. 2021
4. 2020

**ಪ್ರ.77) ಈ ಕೆಳಗಿನವರಲ್ಲಿ ಯಾವ ಗಣ್ಯ ವ್ಯಕ್ತಿಗಳು ಭಾರತೀಯ ಸಂವಿಧಾನವನ್ನು 'ವಕೀಲರ ಸ್ವರ್ಗ ಮತ್ತು ಸಾಮಾನ್ಯ ನಾಗರಿಕರಿಗೆ ಅರ್ಥಮಾಡಿಕೊಳ್ಳಲು ಕಷ್ಟ' ಎಂದು ಕರೆದರು?.**
1. ಮೋರಿಸ್ ಜೋನ್ಸ್ (Morris Jones)
2. ಗ್ರ್ಯಾನ್‌ವಿಲ್ಲೆ ಆಸ್ಟಿನ್ (Granville Austin)
3. ಕೆ.ಸಿ ವ್ಹೆರ್ (KC Wheare)
4. ಐವರ್ ಜೆನ್ನಿಂಗ್ (Ivor Jenning)

**ಪ್ರ.78) ಪ್ರಕಾಶಮಾನ ತೀವ್ರತೆಯ SI ಏಕಮಾನ ಯಾವುದು?**
1. ಜೌಲ್ಸ್
2. ಕ್ಯಾಂಡಿಲಾ (candela)
3. ವ್ಯಾಟ್ (watt)
4. ಕೆಲ್ವಿನ್ (kelvin)

**ಪ್ರ.79) ಆ್ಯನಿ ಬೆಸೆಂಟ್‌ರವರ ಮಾರ್ಗದರ್ಶನದಲ್ಲಿ ಈ ಕೆಳಗಿನವುಗಳಲ್ಲಿ ಯಾವ ಸುಧಾರಣಾ ಸಂಸ್ಥೆಯು ಪ್ರಾಚೀನ ಭಾರತೀಯ ಧರ್ಮಗಳು, ತತ್ವಶಾಸ್ತ್ರಗಳು ಮತ್ತು ತತ್ವಸಿದ್ಧಾಂತಗಳ ಅಧ್ಯಯನವನ್ನು ಪ್ರೋತ್ಸಾಹಿಸಿತು?**
1. ಆರ್ಯ ಸಮಾಜ
2. ಥಿಯೋಸಾಫಿಕಲ್ ಸೊಸೈಟಿ
3. ರಾಮಕೃಷ್ಣ ಮಿಷನ್
4. ಬ್ರಹ್ಮ ಸಮಾಜ

**ಪ್ರ.80) ಈ ಕೆಳಗಿನ ಯಾವ ಅನುಚ್ಛೇದವು ಭಾರತದ ನಿಯಂತ್ರಕರು ಮತ್ತು ಮಹಾಲೇಖಪಾಲರಿಗೆ ಸಂಬಂಧಿಸಿದೆ?**
1. ಅನುಚ್ಛೇದ 135
2. ಅನುಚ್ಛೇದ 142
3. ಅನುಚ್ಛೇದ 148
4. ಅನುಚ್ಛೇದ 154

**ಪ್ರ.81) 'ಮಣ್ಣಿನ ಆರೋಗ್ಯ ಕಾರ್ಡ್' ('Soil Health Card) ಯೋಜನೆಯು ________ ಹೊರತುಪಡಿಸಿ ಕೆಳಗಿನವುಗಳಲ್ಲಿ ಎಲ್ಲವನ್ನು ಒಳಗೊಂಡಿದೆ:**
1. ಪೋಷಕಾಂಶ ನಿರ್ವಹಣಾ ಪದ್ಧತಿಗಳ ಉತ್ತೇಜನ ಮತ್ತು ರಸಗೊಬ್ಬರಗಳ ಸಮತೋಲಿತ ಬಳಕೆ
2. ರೈತರ ಆದಾಯವನ್ನು ದ್ವಿಗುಣಗೊಳಿಸುವುದು
3. ಫಲೀಕರಣ ಪದ್ಧತಿಗಳಲ್ಲಿ ಪೋಷಕಾಂಶಗಳ ಕೊರತೆಯನ್ನು ಪರಿಹರಿಸಲು ಒಂದು ಆಧಾರವನ್ನು ಒದಗಿಸುವುದು
4. ಮಣ್ಣು ಪರೀಕ್ಷಾ ಪ್ರಯೋಗಾಲಯಗಳ ಕಾರ್ಯನಿರ್ವಹಣೆಯನ್ನು ಅಭಿವೃದ್ಧಿಪಡಿಸುವುದು ಮತ್ತು ಬಲಪಡಿಸುವುದು

**ಪ್ರ.82) ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಅಭಿನವ್ ಭಾರತ್ ಮಂದಿರ್ (ಯಂಗ್ ಇಂಡಿಯಾ ಸೊಸೈಟಿ) ಎಂಬ ಭಾರತೀಯ ರಹಸ್ಯ ಸಂಸ್ಥೆಯನ್ನು ________ ಮತ್ತು ಅವರ ಸಹೋದರರು ಸ್ಥಾಪಿಸಿದರು.**
1. ದಾಮೋದರ್ ಹರಿ ಚಾಪೇಕರ್
2. ಸರ್ದಾರ್ ವಲ್ಲಭಭಾಯಿ ಪಟೇಲ್
3. ವಿನಾಯಕ ದಾಮೋದರ್ ಸಾವರ್ಕರ್
4. ಮಹಾದೇವ್ ಗೋವಿಂದ ರಾನಡೆ

**ಪ್ರ.83) 2023 ರಲ್ಲಿ ಸಂಪ್ರಿತಿ (SAMPRITI) ಸೇನಾ ಕವಾಯತಿನ 11ನೇ ಆವೃತ್ತಿಯನ್ನು ಎಲ್ಲಿ ನಡೆಸಲಾಯಿತು?**
1. ಢಾಕಾ, ಬಾಂಗ್ಲಾದೇಶ
2. ಉಮ್ರೋಯಿ, ಭಾರತ
3. ಚಿತ್ತಾಗಾಂಗ್, ಬಾಂಗ್ಲಾದೇಶ
4. ಕೋಲ್ಕತ, ಭಾರತ

**ಪ್ರ.84) ಭಾರತದಲ್ಲಿ ಮಿಷನ್ ಪೋಷಣ್ 2.0 ಯೋಜನೆಯನ್ನು ಯಾವ ವರ್ಷದಲ್ಲಿ ಪ್ರಾರಂಭಿಸಲಾಯಿತು?**
1. 2020
2. 2023
3. 2021
4. 2024

**ಪ್ರ.85) ಅಂತಾರಾಷ್ಟ್ರೀಯ ಏಕಮಾನ ಪದ್ಧತಿಗಳಲ್ಲಿ (SI), ಯಾವ ಭೌತಿಕ ಅಂಶವು 6.62607015×10−34 ಜೌಲ್–ಹರ್ಟ್ಜ್−1 ಮೌಲ್ಯವನ್ನು ಹೊಂದಿದೆ?**
1. ಅವೋಗಾಡ್ರೊ ಸ್ಥಿರಾಂಕ
2. ಪ್ಲಾಂಕ್‌ನ ಸ್ಥಿರಾಂಕ
3. ವಾನ್ ಕ್ಲಿಟ್ಜಿಂಗ್ ಸ್ಥಿರಾಂಕ
4. ಸ್ಟೀಫನ್–ಬೋಲ್ಟ್ಜ್‌ಮನ್ ಸ್ಥಿರಾಂಕ


www.shikarat.com

## RPF SI 2024 ಅಧಿಕೃತ ಪ್ರಶ್ನೆಪತ್ರಿಕೆಗಳು

**ಪ್ರ.86) 2024 ರ ಪ್ಯಾರಿಸ್ ಪ್ಯಾರಾಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಬೆಳ್ಳಿ ಪದಕ ವಿಜೇತರಾದ ತುಳಸಿಮತಿ ಮುರುಗೇಶನ್ ಅವರು ಈ ಕೆಳಗಿನ ಯಾವ ಆಟಕ್ಕೆ ಸಂಬಂಧಿಸಿದ್ದಾರೆ?**

1. ಶೂಟಿಂಗ್
2. ಬಿಲ್ಲುಗಾರಿಕೆ
3. ಬ್ಯಾಡ್ಮಿಂಟನ್
4. ಅಥ್ಲೆಟಿಕ್ಸ್

**ಪ್ರ.87) ಉತ್ತರದಿಂದ ದಕ್ಷಿಣದ ವರೆಗೆ ಭಾರತದ ಈ ಕೆಳಗಿನ ಜೀವಗೋಳ ಮೀಸಲುಗಳ ಸರಿಯಾದ ಅನುಕ್ರಮ ಯಾವುದು?**

**1. ದಿಬ್ರು-ಸೈಖೋವಾ 2. ಮಾನಸ್ 3. ನೋಕ್ರೆಕ್**

1. 3, 1, 2
2. 2, 3, 1
3. 1, 2, 3
4. 1, 3, 2

**ಪ್ರ.88) ಭಾರತದ ಸಂವಿಧಾನದ ಯಾವ ಅನುಚ್ಛೇದವು ಭಾರತದ ಕೇಂದ್ರಾಡಳಿತ ಪ್ರದೇಶಗಳಲ್ಲಿ ಉಚ್ಚ ನ್ಯಾಯಾಲಯಗಳ ಸ್ಥಾಪನೆಗೆ ಸಂಬಂಧಿಸಿದೆ?**

1. ಅನುಚ್ಛೇದ 239B
2. ಅನುಚ್ಛೇದ 252
3. ಅನುಚ್ಛೇದ 241
4. ಅನುಚ್ಛೇದ 239

**ಪ್ರ.89) ಭಾರತದಲ್ಲಿ ಉಚ್ಚ ನ್ಯಾಯಾಲಯಗಳ ಸ್ಥಾಪನೆಗೆ ಸಂಬಂಧಿಸಿದ ಅಧಿನಿಯಮ ಈ ಕೆಳಗಿನವುಗಳಲ್ಲಿ ಯಾವುದಾಗಿದೆ?**

1. ಭಾರತೀಯ ಮಂಡಳಿಗಳ ಅಧಿನಿಯಮ, 1861
2. ಭಾರತ ಸರ್ಕಾರದ ಅಧಿನಿಯಮ, 1861
3. ಭಾರತದ ಸಂವಿಧಾನ ಅಧಿನಿಯಮ , 1945
4. ಭಾರತದ ಉಚ್ಚ ನ್ಯಾಯಾಲಯಗಳ ಅಧಿನಿಯಮ, 1861

**ಪ್ರ.90) 2013 ರಲ್ಲಿ, ಶ್ರೀಮಂತ ವಿದೇಶಿ ಹೂಡಿಕೆದಾರರಿಗೆ ವಾಸಿಸಲು ಪರವಾನಗಿಗಳನ್ನು ನೀಡಲೆಂದು ಪರಿಚಯಿಸಿದ 'ಗೋಲ್ಡನ್ ವೀಸಾ' ಕಾರ್ಯಕ್ರಮವನ್ನು 2024 ರ ಜನವರಿ 1 ರಲ್ಲಿ ಸ್ಥಗಿತಗೊಳಿಸಿದ ದೇಶ ಯಾವುದು?**

1. ಡೆನ್ಮಾರ್ಕ್
2. ಆಸ್ಟ್ರಿಯ
3. ನೆದರ್‌ಲ್ಯಾಂಡ್
4. ಹಂಗರಿ

**ಪ್ರ.91) ಅತ್ಯಂತ ಶೋಷಿತ, ಸಾಕುಪ್ರಾಣಿ ಮತ್ತು ಹಿಪ್ಪುನೇರಳೆ ಅಲ್ಲದ ವಾಣಿಜ್ಯೋಪಯೋಗಿ ರೇಷ್ಮೆ ಹುಳುಗಳಲ್ಲಿ ಒಂದಾದ 'ಎರಿ ರೇಷ್ಮೆ ಹುಳು'ವಿನ ವೈಜ್ಞಾನಿಕ ಹೆಸರೇನು?**

1. ಬಾಂಬಿಕ್ಸ್ ಮೋರಿ (Bombyx mori)
2. ಆಂಥೇರಿಯಾ ಮೈಲಿಟ್ಟಾ (Antheraea mylitta)
3. ಫಿಲೋಸಾಮಿಯಾ ರಿಸಿನಿ (Philosamia ricinii)
4. ಮೊರಸ್ ಆಲ್ಬಾ (Morus alba)

**ಪ್ರ.92) 1 erg ಎಂಬುದು ______ ಗೆ ಸಮನಾಗಿದೆ.**

1. $10^{-5}$ J
2. 4.186 J
3. $10^{7}$ J
4. $10^{-7}$ J

**ಪ್ರ.93) ಭಾರತದ ಎಂಟನೇ ಪಂಚವಾರ್ಷಿಕ ಯೋಜನೆಯ ಅಧ್ಯಕ್ಷರಾಗಿದ್ದವರು ಯಾರು?**

1. ಮನಮೋಹನ್ ಸಿಂಗ್
2. ಅಟಲ್ ಬಿಹಾರಿ ವಾಜಪೇಯಿ
3. ಪಿ.ವಿ. ನರಸಿಂಹ ರಾವ್
4. ನರೇಂದ್ರ ಮೋದಿ

**ಪ್ರ.94) ಸ್ಮಾರ್ಟ್ ಸಿಟಿ ಇಂಡಿಯಾ ಪ್ರಶಸ್ತಿ 2020 ಅನ್ನು ಗೆದ್ದ ನಗರ ಯಾವುದು?**

1. ಬೆಂಗಳೂರು
2. ವಾರಣಾಸಿ
3. ಪುಣೆ
4. ಸೂರತ್

**ಪ್ರ.95) 2011ರ ಜನಗಣತಿಯಲ್ಲಿ ಅತ್ಯಂತ ಹೆಚ್ಚು ಸಾಕ್ಷರತೆಯನ್ನು ದಾಖಲಿಸಿದ ಸೆರ್ಚಿಪ್ (ಖಜಡಿಛಿಟಖಿ) ಎಂಬುದು ಈ ಕೆಳಗಿನ ಯಾವ ರಾಜ್ಯದ ಜಿಲ್ಲೆಯಾಗಿದೆ?**

1. ಕೇರಳ
2. ರಾಜಸ್ಥಾನ
3. ಮಿಜೋರಾಂ
4. ಆಂಧ್ರಪ್ರದೇಶ

**ಪ್ರ.96) ಭಾರತೀಯ ನೌಕಾಪಡೆ ಮತ್ತು ಬಾಂಗ್ಲಾದೇಶ ನೌಕಾಪಡೆಯ ನಡುವಿನ ಜಂಟಿ ಸಮರಭ್ಯಾಸದ 4 ನೇ ಆವೃತ್ತಿಯಾದ ಬೊಂಗೋಸಾಗರ್ -23 ಎಂಬುದು 2023 ರ ___________ ತಿಂಗಳ ಲ್ಲಿ ನಡೆಯಿತು.**

1. ಜನವರಿ
2. ನವೆಂಬರ್
3. ಮೇ
4. ಆಗಸ್ಟ್

**ಪ್ರ.97) ಉಷ್ಣವಲಯದ ಎಲೆಯುದುರುವ ಕಾಡುಗಳ ವಿಶಿಷ್ಟ ಲಕ್ಷಣ ಈ ಕೆಳಗಿನವುಗಳಲ್ಲಿ ಯಾವುದು?**

1. ಮರಗಳು ಋತುಮಾನಕ್ಕನುಗುಣವಾಗಿ ಎಲೆಗಳನ್ನು ಉದುರಿಸುತ್ತವೆ
2. ದೊಡ್ಡ ಎಲೆಗಳನ್ನು ಹೊಂದಿರುವ ಮರಗಳು
3. ವರ್ಷಪೂರ್ತಿ ದಟ್ಟವಾದ ಎತ್ತರದ ಚಾಚುರೆಂಬೆಗಳ ಸ್ತರ ಹೊಂದಿರುತ್ತವೆ
4. ವಿರಳ ಸಸ್ಯವರ್ಗ

**ಪ್ರ.98) ದೆಹಲಿಯ ಯಾವ ಸುಲ್ತಾನನು ಕೃಷಿ ಕ್ಷೇತ್ರದ ಅಭಿವೃದ್ಧಿಗಾಗಿ ದಿವಾನ್ ಇ ಕೋಹಿ (Diwan-i Kohi) ಎಂಬ ನೂತನ ಇಲಾಖೆಯನ್ನು ಪ್ರಾರಂಭಿಸಿದನು?**

1. ಘಿಯಾಸುದ್ದೀನ್ ಬಲ್ಬನ್
2. ಮುಹಮ್ಮದ್-ಬಿನ್-ತುಘಲಕ್
3. ಅಲ್ಲಾವುದ್ದೀನ್ ಖಿಲ್ಜಿ
4. ಶಂಸುದ್ದೀನ್ ಇಲ್ತುತ್ಮಿಶ್


LAXMIKANT PATIL
www.shikarat.com

**ಪ್ರ.99) 2024ರ ಆಗಸ್ಟ್‌ನಲ್ಲಿ, ಪೆಟ್ರೋಲಿಯಂ ಕಾರ್ಯಾಚರಣೆಗಳನ್ನು ________ ಬೇರ್ಪಡಿಸಲು, ಕೇಂದ್ರ ಸರ್ಕಾರವು ಲೋಕಸಭೆಯಲ್ಲಿ ತೈಲ ಕ್ಷೇತ್ರಗಳ (ನಿಯಂತ್ರಣ ಮತ್ತು ಅಭಿವೃದ್ಧಿ) ತಿದ್ದುಪಡಿ ಮಸೂದೆ, 2024 ಅನ್ನು ಮಂಡಿಸಿತು.**

1. ಕಡಲ ಚಟುವಟಿಕೆಗಳಿಂದ
2. ಅರಣ್ಯಗಾರಿಕೆಯಿಂದ
3. ಗಣಿಗಾರಿಕೆಯಿಂದ
4. ಕೃಷಿಯಿಂದ

**ಪ್ರ.100) ದೆಹಲಿ ಸುಲ್ತಾನರ ಮೊದಲ ಸರ್ವಶ್ರೇಷ್ಠ ಆಡಳಿತಗಾರ ಎಂದು ಈ ಕೆಳಗಿನವರಲ್ಲಿ ಯಾರನ್ನು ಕರೆಯಲಾಗುತ್ತದೆ?**

1. ಜಲಾಲ್ ಅಲ್-ದೀನ್ ಫಿರೋಜ್ ಖಿಲ್ಜಿ
2. ಘಯಾಸ್ಸುದ್ದೀನ್ ಸುಲ್ತಾನ್ ಮಹಮೂದ್
3. ಕುತುಬ್ ಅಲ್-ದೀನ್ ಐಬಕ್
4. ಶಮ್ಸ್ ಅಲ್-ದಿನ್ ಇಲ್ತುತ್‌ಮಿಶ್

**ಪ್ರ.101) ಭಾರತದ ಈ ಕೆಳಗಿನ ಯಾವ ರಾಜ್ಯವು ಕೃಷಿಯಲ್ಲಿ ಮಹಿಳೆಯರಿಗಾಗಿ ತನ್ವಾ (TANWA) ಯೋಜನೆಯನ್ನು ಪ್ರಾರಂಭಿಸಿದೆ?**

1. ತಮಿಳುನಾಡು
2. ಗೋವಾ
3. ಪಶ್ಚಿಮ ಬಂಗಾಳ
4. ಅಸ್ಸಾಂ

**ಪ್ರ.102) 1955 ರ ಪೌರತ್ವ ಕಾಯ್ದೆ ಅಡಿಯಲ್ಲಿ, ಭಾರತೀಯ ಮೂಲದ ವ್ಯಕ್ತಿಯು ಭಾರತದ ಪ್ರಜೆಯಾಗಲು ಎಷ್ಟು ವರ್ಷಗಳ ಕಾಲ ಭಾರತದಲ್ಲಿ ನೆಲೆಸಬೇಕು?**

1. 5 ವರ್ಷಗಳು
2. 3 ವರ್ಷಗಳು
3. 10 ವರ್ಷಗಳು
4. 7 ವರ್ಷಗಳು

**ಪ್ರ.103) ಭಾರತದ ಸಂವಿಧಾನದ ಪ್ರಕಾರ, ಯಾವುದೇ ಭಾರತೀಯ ಮೂಲದ ವ್ಯಕ್ತಿಯು ಭಾರತೀಯ ನಾಗರೀಕತ್ವದ ನೋಂದಣಿಗೆ ಅರ್ಹತೆ ಪಡೆಯಲು ಕನಿಷ್ಠ ಎಷ್ಟು ವರ್ಷಗಳವರೆಗೆ ಭಾರತದಲ್ಲಿ ವಾಸ ಮಾಡಿರಬೇಕು?**

1. 7 ವರ್ಷಗಳು
2. 10 ವರ್ಷಗಳು
3. 5 ವರ್ಷಗಳು
4. 2 ವರ್ಷಗಳು

**ಪ್ರ.104) ಸುಸ್ಥಿರ ಕೃಷಿ ಪದ್ಧತಿಗಳು ಗ್ರಾಮೀಣಾಭಿವೃದ್ಧಿಗೆ ಹೇಗೆ ಕೊಡುಗೆ ನೀಡುತ್ತವೆ?**

1. ರಾಸಾಯನಿಕ ಗೊಬ್ಬರಗಳು ಮತ್ತು ಕೀಟನಾಶಕಗಳ ಮೇಲಿನ ಅವಲಂಬನೆಯನ್ನು ಹೆಚ್ಚಿಸುತ್ತವೆ
2. ಸುಸ್ಥಿರ ಅಭ್ಯಾಸಗಳು ಗ್ರಾಮೀಣಾಭಿವೃದ್ಧಿಯ ಮೇಲೆ ಕನಿಷ್ಠ ಪರಿಣಾಮ ಬೀರುತ್ತವೆ ಮತ್ತು ಪರಿಸರ ಸಂರಕ್ಷಣೆಯ ಮೇಲೆ ಮಾತ್ರ ಗಮನ ಹರಿಸುತ್ತವೆ
3. ಆಧುನಿಕ ತಂತ್ರಜ್ಞಾನಗಳ ಬಳಕೆಯನ್ನು ಸೀಮಿತಗೊಳಿಸುವ ಮೂಲಕ ಅವು ಕೃಷಿ ಉತ್ಪಾದಕತೆಯನ್ನು ನಿರ್ಬಂಧಿಸುತ್ತವೆ
4. ಮಣ್ಣಿನ ಆರೋಗ್ಯ, ಜಲ ಸಂರಕ್ಷಣೆ ಮತ್ತು ಜೀವವೈವಿಧ್ಯತೆಯನ್ನು ವೃದ್ಧಿಸುವ ಮೂಲಕ, ಉತ್ತಮ ದೀರ್ಘಕಾಲೀನ ಕೃಷಿ ಉತ್ಪಾದಕತೆ ಮತ್ತು ಗ್ರಾಮೀಣ ಜೀವನೋಪಾಯಕ್ಕೆ ಕಾರಣವಾಗುತ್ತದೆ

**ಪ್ರ.105) 1939 ರಲ್ಲಿ, ಈ ಕೆಳಗಿನ ರಾಷ್ಟ್ರೀಯ ನಾಯಕರಲ್ಲಿ ಯಾರು ಅಖಿಲ ಭಾರತ ಫಾರ್ವರ್ಡ್ ಬ್ಲಾಕ್ ಸ್ಥಾಪಿಸಿದರು?**

1. ಅಬುಲ್ ಕಲಾಂ ಆಜಾದ್
2. ಜವಾಹರಲಾಲ್ ನೆಹರು
3. ಸುಭಾಷ್ ಚಂದ್ರ ಬೋಸ್
4. ಪಂಡಿತ್ ಗೋವಿಂದ ವಲ್ಲಭ ಪಂತ್

**ಪ್ರ.106) 14 ನೇ ಶತಮಾನದ ದ್ವಿತೀಯಾರ್ಧದಲ್ಲಿ, ದಕ್ಷಿಣ ಭಾರತದಲ್ಲಿ ಮೂರು ಸ್ವತಂತ್ರ ಸಾಮ್ರಾಜ್ಯಗಳ ಉದಯವಾಯಿತು. ಈ ಕೆಳಗಿನ ಯಾವುದು ಅದರ ಭಾಗವಾಗಿರಲಿಲ್ಲ?**

1. ದೌಲತಾಬಾದ್
2. ಬಹಮನಿ
3. ವಿಜಯನಗರ
4. ಮಾಬರ್ (Ma'bar)

**ಪ್ರ.107) 2024 ರ ಜುಲೈ ನಲ್ಲಿ, ರಾಬರ್ಟ್ ಜೆರಾರ್ಡ್ ರವಿ ಅವರು ಈ ಕೆಳಗಿನ ಯಾವ ಟೆಲಿಕಾಂ ಕಂಪನಿಯ ನೂತನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ (CMD) ಆದರು?**

1. ರಿಲಯನ್ಸ್ ಜಿಯೋ ಇನ್ಫೋಕಾಮ್
2. ಭಾರತ್ ಸಂಚಾರ್ ನಿಗಮ್ ಲಿಮಿಟೆಡ್ (BSNL)
3. ವೊಡಾಫೋನ್ ಐಡಿಯಾ ಲಿಮಿಟೆಡ್
4. ಮಹಾನಗರ್ ಟೆಲಿಫೋನ್ ನಿಗಮ್ ಲಿಮಿಟೆಡ್ (MTNL)

**ಪ್ರ.108) ಹಣದುಬ್ಬರವನ್ನು ನಿಯಂತ್ರಿಸಲು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (RBI) ರೆಪೊ ದರವನ್ನು ಹೇಗೆ ಬಳಸುತ್ತದೆ?**

1. ಸರಕು ಮತ್ತು ಸೇವೆಗಳ ಬೆಲೆಗಳನ್ನು ನೇರವಾಗಿ ಕಡಿಮೆ ಮಾಡಲು ರೆಪೊ ದರವನ್ನು ಹೆಚ್ಚಿಸುವುದು.
2. ಹಣದುಬ್ಬರದ ಮಟ್ಟವನ್ನು ಲೆಕ್ಕಿಸದೆ ಸ್ಥಿರವಾದ ರೆಪೊ ದರವನ್ನು ಕಾಪಾಡಿಕೊಳ್ಳುವುದು.
3. ಹಣದ ಪೂರೈಕೆಯನ್ನು ಹೆಚ್ಚಿಸಲು ರೆಪೊ ದರವನ್ನು ತಗ್ಗಿಸಿ , ತನ್ಮೂಲಕ ಖರ್ಚು ಮಾಡುವಿಕೆಯನ್ನು ಮತ್ತು ಹೂಡಿಕೆಯನ್ನು ಉತ್ತೇಜಿಸುವುದು.
4. ರೆಪೊ ದರವನ್ನು ಹೆಚ್ಚಿಸುವುದು ಮತ್ತು ಬ್ಯಾಂಕುಗಳಿಗೆ ಸಾಲ ಪಡೆಯುವಿಕೆಯನ್ನು ಹೆಚ್ಚು ದುಬಾರಿಯನ್ನಾಗಿ ಮಾಡುವುದು, ಆ ಮೂಲಕ ಆರ್ಥಿಕತೆಯಲ್ಲಿ ಹಣದ ಪೂರೈಕೆಯನ್ನು ಕಡಿಮೆ ಮಾಡುವುದು.

**ಪ್ರ.109) 2023 ರ ಅಕ್ಟೋಬರ್ ನಲ್ಲಿ ಈ ಕೆಳಗಿನ ಯಾವುದು ನವೀಕರಿಸಿದ ಸುಧಾರಿತ ಸಾರಿಗೆ ನಿರ್ವಹಣಾ ವ್ಯವಸ್ಥೆಗೆ ಹೊಸ ಸೇರ್ಪಡೆಯಾಗಿದೆ?**



www.shikarat.com

1. ವಾಹನದ ವೇಗ ಪತ್ತೆ ವ್ಯವಸ್ಥೆ (Vehicle Speed Detection System (VSDS)
2. ಸಂಚಾರ ನಿಗಾವಣೆ ಕ್ಯಾಮೆರಾ ವ್ಯವಸ್ಥೆ (Traffic Monitoring Camera System (TMCS)
3. ವೀಡಿಯೊ ಘಟನಾ ಪತ್ತೆ ಮತ್ತು ಜಾರಿ ವ್ಯವಸ್ಥೆ (Video Incident Detection and Enforcement System (VIDES)
4. ರೇಡಿಯೋ ಫ್ರೀಕ್ವೆನ್ಸಿ ಗುರುತಿಸುವಿಕೆ (Radio Frequency Identification (RFID)

**ಪ್ರ.110) ನವಶಿಲಾಯುಗದ ತಾಣವಾದ ಕುಪಗಲ್ (Kupagal) ______ ರಾಜ್ಯದಲ್ಲಿದೆ.**
1. ಕೇರಳ
2. ತೆಲಂಗಾಣ
3. ಕರ್ನಾಟಕ
4. ಆಂಧ್ರಪ್ರದೇಶ

**ಪ್ರ.111) ಈ ಕೆಳಗಿನವುಗಳಲ್ಲಿ ಯಾವ ವಾದ್ಯವನ್ನು ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿ ಸಾಮಾನ್ಯವಾಗಿ ಬಳಸಲಾಗುವುದಿಲ್ಲ?**
1. ಘಟಂ
2. ವೀಣೆ
3. ಸರೋದ್
4. ಸಿತಾರ್

**ಪ್ರ.112) ಭಾರತದಲ್ಲಿ 1999 ರಿಂದ 2000 ರ ಅವಧಿಯಲ್ಲಿ ಉದ್ಯೋಗಸ್ಥ ಜನರ ಪೈಕಿ ಶೇಕಡಾ ಎಷ್ಟು ಜನರು ದ್ವಿತೀಯ ವಲಯದಲ್ಲಿ ಉದ್ಯೋಗ ಮಾಡುತ್ತಿದ್ದರು?**
1. 23.8%   2. 16.8%
3. 12.8%   4. 15.8%

**ಪ್ರ.113) ಜೀವಂತ ಅಥವಾ ಸ್ಥಿರ ಜೀವಕೋಶಗಳಿಗೆ ಬಣ್ಣ ಹಚ್ಚಲು ಬಳಸಲಾಗುವ ನೀಲಿ-ಪ್ರತಿದೀಪಕ ವರ್ಣಕವನ್ನು ಹೆಸರಿಸಿ.**
1. ಬಾಡಿಪಿ (BODIPY)
2. ಫ್ಯೂಶಿನ್ (Fuchsin)
3. ಫ್ಯಾಲೊಯ್ಡಿನ್ (Phalloidin)
4. ಡಿಎಪಿಐ (DAPI)

**ಪ್ರ.114) ಈ ಕೆಳಗಿನವರಲ್ಲಿ ಭಾರತದ ಸಂಸದೀಯ ವ್ಯವಹಾರಗಳ ಸಮಿತಿಯ ಅಧ್ಯಕ್ಷರು ಯಾರು?**
1. ಪ್ರಧಾನ ಮಂತ್ರಿ
2. ಕೇಂದ್ರ ರಕ್ಷಣಾ ಸಚಿವ
3. ಕೇಂದ್ರ ಗೃಹ ಸಚಿವ
4. ಕೇಂದ್ರ ಹಣಕಾಸು ಸಚಿವ

**ಪ್ರ.115) 2024 ರ ಅಕ್ಟೋಬರ್ ತಿಂಗಳಲ್ಲಿ ಬಾಂಗ್ಲಾದೇಶ ವಿರುದ್ಧ ಆಡಿದ ಅಂತರರಾಷ್ಟ್ರೀಯ T20 ಕ್ರಿಕೆಟ್ ಸರಣಿಗೆ ಭಾರತದ ತಂಡದ ನಾಯಕರಾಗಿ ಯಾರನ್ನು ಹೆಸರಿಸಲಾಯಿತು?**
1. ಹಾರ್ದಿಕ್ ಪಾಂಡ್ಯ
2. ಸೂರ್ಯಕುಮಾರ್ ಯಾದವ್
3. ಸಂಜು ಸ್ಯಾಮ್ಸನ್
4. ರಿಂಕು ಸಿಂಗ್

**ಪ್ರ.116) ಕೋಶ ಜೀವಶಾಸ್ತ್ರಕ್ಕೆ ಸಂಬಂಧಿಸಿದಂತೆ, ಈ ಕೆಳಗಿನವುಗಳಲ್ಲಿ ಯಾವ ಹೇಳಿಕೆಯು ಸ್ಯೂಡೋಪೋಡಿಯಾವನ್ನು ಅತ್ಯುತ್ತಮವಾಗಿ ವಿವರಿಸುತ್ತದೆ?**
1. ಚಲನೆ ಮತ್ತು ಉಸಿರಾಟಕ್ಕಾಗಿ ಬಳಸುವ ಜೀವಕೋಶಗಳ ಮೇಲ್ಮೈಯಲ್ಲಿನ ಶಾಶ್ವತ ರಚನೆಗಳು
2. ಜೀವಕೋಶಕ್ಕೆ ಶಕ್ತಿಯನ್ನು ಉತ್ಪಾದಿಸುವ ವಿಶೇಷ ಅಂಗಗಳು
3. ಕೋಶಪೊರೆಯ ತಾತ್ಕಾಲಿಕ ಹೊರಚಾಚಿರುವಿಕೆಗಳು ಚಲನೆ ಮತ್ತು ಆಹಾರ ಪೂರೈಕೆಗೆ ಬಳಸಲ್ಪಡುತ್ತದೆ
4. ಜೀವಕೋಶಕ್ಕೆ ಯಾಂತ್ರಿಕ ಬೆಂಬಲವನ್ನು ಒದಗಿಸುವ ಗಡುಸಾದ ರಚನೆಗಳು

**ಪ್ರ.117) ಈ ಕೆಳಗಿನವುಗಳಲ್ಲಿ ಅರುಣಾಚಲ ಪ್ರದೇಶದ ಆದಿ ಸಮುದಾಯದ ಸಾಮಾಜಿಕ-ಧಾರ್ಮಿಕ ಹಬ್ಬ ಯಾವುದು?**
1. ಸೋಲಂಗ್ ಹಬ್ಬ
2. ರಾಜಗೀರ್ ನೃತ್ಯ ಉತ್ಸವ
3. ಬೋಹಾಗ್ ಬಿಹು
4. ಛತ್ ಪೂಜೆ

**ಪ್ರ.118) ಈ ಕೆಳಗಿನವರಲ್ಲಿ 'ದಿ ಇನ್ಹೆರಿಟೆನ್ಸ್ ಆಫ್ ಲಾಸ್'( 'The Inheritance of Loss') ಎಂಬ ಪುಸ್ತಕವನ್ನು ಬರೆದವರು ಯಾರು?**
1. ಕಿರಣ್ ದೇಸಾಯಿ
2. ರಾಜೀವ್ ಮಲ್ಹೋತ್ರಾ
3. ಅಮಿತಾವ್ ಘೋಷ್
4. ಅಲ್ಕಾ ಜೋಶಿ

**ಪ್ರ.119) 2024 ರ ಜನವರಿಯಲ್ಲಿ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಪ್ರಾರಂಭಿಸಿದ ಕೊಚ್ಚಿ-ಲಕ್ಷದ್ವೀಪ ಜಲಾಂತರ್ಗಾಮಿ ಆಪ್ಟಿಕಲ್ ಫೈಬರ್ ಕೇಬಲ್ ಯೋಜನೆಗೆ ಈ ಕೆಳಗಿನ ಯಾವ ಸಂಸ್ಥೆಯು ಧನಸಹಾಯ ನೀಡುತ್ತಿದೆ?**
1. ಯೂನಿವರ್ಸಲ್ ಸರ್ವಿಸಸ್ ಆಬ್ಲಿಗೇಷನ್ ಫಂಡ್
2. ವಿಶ್ವ ಬ್ಯಾಂಕ್
3. ಏಷ್ಯನ್ ಡೆವಲಪ್ಮೆಂಟ್ ಬ್ಯಾಂಕ್
4. ಕೇರಳ ಸರ್ಕಾರ

**ಪ್ರ.120) ಡಿಸೆಂಬರ್ 1 2023ರಿಂದ 2024 ರ ನವೆಂಬರ್ 30 ರವರೆಗೆ G20 ಯ ಅಧ್ಯಕ್ಷತೆಯನ್ನು ಹೊಂದಿದ್ದ ದೇಶ ಯಾವುದು?**
1. ದಕ್ಷಿಣ ಆಫ್ರಿಕಾ   2. ಇಂಡೋನೇಷ್ಯಾ
3. ಬ್ರೆಜಿಲ್   4. ಭಾರತ

LAXMIKANT PATIL


www.shikarat.com

**KEY ANSWERS:-**

| | | | | | | | |
|---|---|---|---|---|---|---|---|
| 1 | 2 | 32 | 2 | 63 | 3 | 94 | 4 |
| 2 | 2 | 33 | 3 | 64 | 3 | 95 | 3 |
| 3 | 1 | 34 | 2 | 65 | 1 | 96 | 2 |
| 4 | 1 | 35 | 1 | 66 | 2 | 97 | 1 |
| 5 | 1 | 36 | 3 | 67 | 1 | 98 | 2 |
| 6 | 2 | 37 | 2 | 68 | 4 | 99 | 3 |
| 7 | 3 | 38 | 1 | 69 | 1 | 100 | 4 |
| 8 | 1 | 39 | 2 | 70 | 3 | 101 | 1 |
| 9 | 1 | 40 | 4 | 71 | 4 | 102 | 4 |
| 10 | 4 | 41 | 1 | 72 | 4 | 103 | 1 |
| 11 | 4 | 42 | 3 | 73 | 4 | 104 | 4 |
| 12 | 3 | 43 | 3 | 74 | 1 | 105 | 3 |
| 13 | 1 | 44 | 2 | 75 | 4 | 106 | 1 |
| 14 | 2 | 45 | 2 | 76 | 3 | 107 | 2 |
| 15 | 2 | 46 | 3 | 77 | 4 | 108 | 4 |
| 16 | 2 | 47 | 2 | 78 | 2 | 109 | 3 |
| 17 | 1 | 48 | 1 | 79 | 2 | 110 | 3 |
| 18 | 2 | 49 | 4 | 80 | 3 | 111 | 1 |
| 19 | 3 | 50 | 1 | 81 | 2 | 112 | 4 |
| 20 | 2 | 51 | 2 | 82 | 3 | 113 | 4 |
| 21 | 4 | 52 | 4 | 83 | 2 | 114 | 2 |
| 22 | 3 | 53 | 1 | 84 | 3 | 115 | 2 |
| 23 | 2 | 54 | 1 | 85 | 2 | 116 | 3 |
| 24 | 1 | 55 | 2 | 86 | 3 | 117 | 1 |
| 25 | 4 | 56 | 4 | 87 | 3 | 118 | 1 |
| 26 | 1 | 57 | 1 | 88 | 3 | 119 | 1 |
| 27 | 2 | 58 | 1 | 89 | 4 | 120 | 3 |
| 28 | 4 | 59 | 1 | 90 | 3 | | |
| 29 | 2 | 60 | 4 | 91 | 3 | | |
| 30 | 1 | 61 | 3 | 92 | 4 | | |
| 31 | 2 | 62 | 1 | 93 | 3 | | |

LAXMIKANT PATIL



www.shikarat.com